ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

02 ಜನವರಿ 2026 ಶುಕ್ರವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 290 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ದೇಶೀಯ ಲೀಗ್ ಪಂದ್ಯವೊಂದರಲ್ಲಿ ಕ್ರಿಕೆಟಿಗನೊಬ್ಬ ಪ್ಯಾಲೆಸ್ಟೀನಿಯನ್ ಧ್ವಜವನ್ನು ಬಳಸಿದ ವಿವಾದ ಭುಗಿಲೆದ್ದಿದೆ.




2026ರಲ್ಲಿ ಬಹಳ ನಿರೀಕ್ಷೆ ಹುಟ್ಟಾಕಿರುವ ಕನ್ನಡ ಸಿನಿಮಾಗಳು ಯಾವುವು? » 2



ಜಗತ್ತಿನ ಜಡವನ್ನು ಜೀವಿಸುವಂತೆ ಮಾಡುವುದು ಶಿಲ್ಪಕಲೆ » 3



ಪೊಲೀಸ್ ಕರ್ತವ್ಯಕ್ಕೆ ಜನ ಪ್ರತಿನಿಧಿಗಳ ಹಸ್ತಕ್ಷೇಪ ಬೇಡ » 4


# ಸಿ.ಎಂ. ಗಾದಿ : ಮುನ್ನೆಲೆಗೆ ಬಂದ ಪರಮೇಶ್ವರ್

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಚರ್ಚೆ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ. ಈ ನಡುವೆ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರು ಗುರುವಾರ ತಾವೂ ಸಹ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿ ಎಂಬ ಸುಳಿವು ನೀಡಿದ್ದಾರೆ.

ಎಲ್ಲರಂತೆ ನನಗೂ ಮಹತ್ವಾಕಾಂಕ್ಷೆಗಳಿವೆ ಮತ್ತು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಿದರೆ ಈ ವರ್ಷ ರಾಜಕೀಯ ಬಡ್ತಿ ಸಿಗುವ ನಿರೀಕ್ಷೆಯಲ್ಲಿದ್ದೇನೆ. ನಾನು ಇಲ್ಲಿಯ ವರೆಗೆ ಆಶಾವಾದಿಯಾಗಿ ಬದುಕಿದ್ದೇನೆ, ಅದು ನನಗೆ ಹೊಸದೇನಲ್ಲ. ಜೀವನದಲ್ಲಿ ಏನಾದರೂ ಆಗಬೇಕೆಂಬ ಮಹತ್ವಾಕಾಂಕ್ಷೆ ಯಾರಿಗಿಲ್ಲವೆಂದು ಪ್ರಶ್ನಿಸಿದರು.

ಮನುಷ್ಯನಿಗೆ ಮಹತ್ವಾಕಾಂಕ್ಷೆ ಇರಬೇಕು, ಇಲ್ಲದಿದ್ದರೆ ಅವನು ಮನುಷ್ಯನಲ್ಲ. ನನಗೂ ಎಲ್ಲರಂತೆ



ಮಹತ್ವಾಕಾಂಕ್ಷೆ ಇದೆ. ನಾನು ರಾಜಕೀಯಕ್ಕೆ ಸೇರಿದಾಗ, ಸ್ವಾಭಾವಿಕವಾಗಿಯೇ ನನಗೆ ಶಾಸಕ ಮತ್ತು ಸಚಿವನಾಗುವ ಆಸೆ ಇತ್ತು. ಪ್ರತಿ ಹೆಜ್ಜೆಯಿಂದ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವ ಬಯಕೆ ಇರುತ್ತದೆ. ಆದರೆ ಅದೆಲ್ಲವೂ ನಮ್ಮ ಹೈಕಮಾಂಡ್‌ಗೆ ಬಿಟ್ಟಿದ್ದು ಎಂದರು.

ಪರಿಸ್ಥಿತಿ ನಿಮಗೆ ಅನುಕೂಲಕರವಾಗಿದೆಯೇ ಎಂದು ಕೇಳಿದಾಗ, ರಾಜ್ಯ ರಾಜಕೀಯದಲ್ಲಿ ವಾತಾವರಣ ಯಾರಿಗೆ ಪೂರಕವಾಗಿದೆ ಎಂದು ಪ್ರತಿನಿತ್ಯವೂ ಚರ್ಚೆಯಾಗುತ್ತಿದೆ. ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ಪರಿಸ್ಥಿತಿ ಯಾರಿಗೆ ಅನುಕೂಲಕರವಾಗಿದೆ ಮತ್ತು ಯಾರಿಗೆ ಅಲ್ಲ ಎಂಬುದನ್ನು ನೋಡಲಾಗುತ್ತಿದೆ ಎಂದು ಹೇಳಿದರು.

**ನೇರವಾಗಿ ಸ್ಪರ್ಧೆಗಿಳಿದ ಪರಮೇಶ್ವರ್**

ನಾಯಕತ್ವ ಬದಲಾವಣೆಯಾಗಬೇಕು, ತಮಗೆ ಮುಖ್ಯಮಂತ್ರಿ ಸ್ಥಾನ ದೊರೆಯಬೇಕು ಎಂದು ಈವರೆಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತ್ರ ಪಟ್ಟು ಹಿಡಿದು ನಾನಾ ರೀತಿಯ ಕಸರತ್ತುಗಳನ್ನು ನಡೆಸುತ್ತಿದ್ದರು. ಈಗ ಪರಮೇಶ್ವರ್ ತೆರೆಮರೆಯಲ್ಲಿ ತಮ್ಮದೇ ಆದ ಲಾಬಿ ನಡೆಸುವ ಮೂಲಕ ನೇರವಾಗಿ ಸ್ಪರ್ಧೆಗಿಳಿಯುತ್ತಿದ್ದಾರೆ.

ಕೆಲವು ಹಿರಿಯ ನಾಯಕರು ದೆಹಲಿಗೆ ಹೋಗಿ ಪರಮೇಶ್ವರ್ ಪರವಾಗಿ ವರದಿ ನೀಡಿದ್ದಾರೆ. ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಮಾಡುವುದರಿಂದ ಪಕ್ಷಕ್ಕಾಗುವ ಲಾಭ-ನಷ್ಟಗಳ ಬಗ್ಗೆ ಪಕ್ಷದ ವರಿಷ್ಠರಿಗೆ ವರದಿ ನೀಡಿದ್ದಾರೆ. ಅಲ್ಲಲ್ಲಿ ಪರಮೇಶ್ವರ್ ಪರವಾದ ಪ್ರತಿಭಟನೆಗಳು ನಡೆದಿದ್ದವು. ಪರಮೇಶ್ವರ್ ಮುಖ್ಯಮಂತ್ರಿ ಯಾಗಬೇಕೆಂಬ ಚರ್ಚೆಗಳ ನಡುವೆ ನಾನಾ ರೀತಿಯ ಗೊಂದಲದ ವಾತಾವರಣಗಳು ಸೃಷ್ಟಿಯಾಗುತ್ತಿವೆ. ಸಿದ್ದರಾಮಯ್ಯ ಅವರ ಬಣ ನಾಯಕತ್ವ ಬದಲಾವಣೆಯಾಗುವುದಾದರೆ ದಲಿತರಿಗೆ ಮುಖ್ಯಮಂತ್ರಿ ಆಗಲು ಅವಕಾಶ ನೀಡಬೇಕೆಂದು ಪ್ರತಿಪಾದಿಸುವ ಮೂಲಕ ಪರೋಕ್ಷವಾಗಿ ಪರಮೇಶ್ವರ್ ಹೆಸರನ್ನು ಮುನ್ನೆಲೆಗೆ ತಂದಿದೆ.

## ಈ ತಿಂಗಳೇ ಬಜೆಟ್ ಸಭೆ: ಸಿದ್ದರಾಮಯ್ಯ



ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಗೊಂದಲ ಇತ್ಯರ್ಥವಾಗದೆ ಮುಂದುವರೆದಿರುವುದರ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೊಸ ವರ್ಷದ ಮೊದಲ ದಿನವೇ ಕುರ್ಚಿ ಕದನಕ್ಕೆ ಹೊಸ ತಿರುವು ನೀಡಿದ್ದಾರೆ. ಈಗಾಗಲೇ 16 ಬಜೆಟ್ ಗಳನ್ನು ಮಂಡಿಸಿರುವ ಸಿದ್ದರಾಮಯ್ಯ ಅವರು, 17ನೇ ಬಜೆಟ್ ಅನ್ನು ನಾನೇ ಮಂಡಿಸುತ್ತೇನೆ. ಈ ತಿಂಗಳಿನಿಂದ ಬಜೆಟ್‌ಗೆ ಸಿದ್ಧತೆ ನಡೆಸುವುದಾಗಿ ಗುರುವಾರ ಹೇಳಿದ್ದಾರೆ.

## ಬಜೆಟ್ ಪೂರ್ವಭಾವಿ ಸಭೆ ತಟಸ್ಥ

ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ನಾಯಕತ್ವದ ಗೊಂದಲಗಳು ಇತ್ಯರ್ಥವಾಗದೆ ಇರುವುದಕ್ಕೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈವರೆಗೂ ಬಜೆಟ್ ಪೂರ್ವಭಾವಿ ಸಭೆಗಳನ್ನು ಆರಂಭಿಸದೇ ತಟಸ್ಥವಾಗಿರುವುದಕ್ಕೂ ಹಲವು ಅನುಮಾನಗಳು ಹುಟ್ಟುಕೊಂಡಿವೆ.

ಹಣಕಾಸು ಸಚಿವರಾದಾಗಿನಿಂದಲೂ ಸಿದ್ದರಾಮಯ್ಯ ಪ್ರತಿ ವರ್ಷ ಡಿಸೆಂಬರ್ ವೇಳೆಗಾಗಲೇ ಬಜೆಟ್ ತಯಾರಿಕೆಯ ಪೂರ್ವಭಾವಿ ಸಭೆಗಳನ್ನು ಆರಂಭಿಸುವುದು ರೂಢಿ ಸಂಪ್ರದಾಯ. ಆದರೆ, ಈ ಬಾರಿ ಹೊಸ ವರ್ಷ ಆರಂಭವಾದರೂ ಈವರೆಗೂ ಬಜೆಟ್ ತಯಾರಿಕೆಗೆ ಸಿದ್ದರಾಮಯ್ಯ ಅವರು ಹೋಗಿಲ್ಲ. ಇದು ಹಲವು ಅನುಮಾನಗಳನ್ನು ಮೂಡಿಸಿದೆ. ಇತ್ತೀಚೆಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಬಜೆಟ್ ಮಂಡನೆಯ ವೇಳೆಗೆ ನಾಯಕತ್ವದ ಗೊಂದಲದ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕು. ಯಾರಾದರೂ ಒಬ್ಬರು ಬಜೆಟ್ ಮಂಡಿಸಲೇಬೇಕಿದೆ. ಆದರೆ, ಅದು ಯಾರೆಂಬುದನ್ನು ನಿರ್ದಿಷ್ಟವಾಗಿ ಹೇಳಬೇಕು ಎಂದಿದ್ದರು.

## ಅಧಿಕಾರ ಸ್ವೀಕರಿಸಿದ ಎಸ್‌ಪಿ ಶುಭನ್ವಿತಾ



• ಪ್ರಜೋದಯ ವರದಿ

ಹಾಸನ: ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಶುಭನ್ವಿತಾ ಅವರು ಗುರುವಾರ ಅಧಿಕಾರ ಸ್ವೀಕಾರ ಮಾಡಿದರು.

ಗುರುವಾರ ಬೆಳಿಗ್ಗೆ ಬೆಂಗಳೂರಿನಿಂದ ಜಿಲ್ಲೆಗೆ ಆಗಮಿಸಿದ ಶುಭನ್ವಿತಾ ಅವರನ್ನು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗು ಸಿಬ್ಬಂದಿ ಆತ್ಮೀಯವಾಗಿ ಸ್ವಾಗತಿಸಿದರು. ಬಳಿಕ ಅವರು ಜಿಲ್ಲಾ ಪೊಲೀಸ್ ಕಚೇರಿಗೆ ತೆರಳಿ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ತಮ್ಮಯ್ಯ, ಶ್ರೀನಿಧಿ ಅವರು ಶುಭನ್ವಿತಾ ಅವರಿಗೆ ಅಧಿಕಾರ ಹಸ್ತಾಂತರಿಸುವ ಮೂಲಕ ನೂತನ ಕರ್ತವ್ಯಕ್ಕೆ ಶುಭಾಶಯ ಕೋರಿದರು. ನೂತನ ಪೊಲೀಸ್ ವರಿಷ್ಠಾಧಿಕಾರಿಯಾಗಿ ಶುಭನ್ವಿತಾ ಅವರು ಜಿಲ್ಲೆಯ ಕಾನೂನು ಸುವ್ಯವಸ್ಥೆ ಬಲಪಡಿಸುವುದು, ಅಪರಾಧ ನಿಯಂತ್ರಣ, ಸಾರ್ವಜನಿಕರೊಂದಿಗೆ ಸ್ನೇಹಪರ ಪೊಲೀಸ್ ವ್ಯವಸ್ಥೆ ರೂಪಿಸುವುದು ಮೊದಲ ಆದ್ಯತೆ ನೀಡಲಾಗುವುದೆಂದು ಭರವಸೆ ನೀಡಿದರು.

# ಗಂಜಿಗೆರೆ ಏತ ನೀರಾವರಿಗೆ ಜನಪ್ರತಿನಿಧಿ ನಿರ್ಲಕ್ಷ್ಯ

## ಮೋಟರ್ ರಿಪೇರಿ ಮಾಡಿ ನೀರು ಹರಿಸುವಂತೆ ಸಿಮೆಂಟ್ ಮಂಜು ಸೂಚನೆ

• ಪ್ರಜೋದಯ ವರದಿ

**ಆಲೂರು:** ಜನಪ್ರತಿನಿಧಿಗಳ ನಿರ್ಲಕ್ಷ್ಯಕ್ಕೆ ಗಂಜಿಗೆರೆ ಏತ ನೀರಾವರಿ ಯೋಜನೆ ಎರಡೂವರೆ ದಶಕಗಳಾದರೂ ಸೂಕ್ತ ವ್ಯವಸ್ಥೆ ಇಲ್ಲದೆ ಈ ಭಾಗದ ರೈತರಲ್ಲಿ ನಿರಾಸೆ ಮೂಡಿಸಿದೆ. ಶೀಘ್ರದಲ್ಲೇ ಯೋಜನೆಗೆ ಚಾಲನೆ ನೀಡಲಾಗುವುದೆಂದು ಶಾಸಕ ಸಿಮೆಂಟ್ ಮಂಜು ಅವರು ಭರವಸೆ ನೀಡಿದರು.

ಗ್ರಾಮಸ್ಥರು ಹಾಗು ಅಧಿಕಾರಿಗಳಿಂದ ಮಾಹಿತಿ ಪಡೆದು ಗಂಜಿಗೆರೆ ಏತ ನೀರಾವರಿ ಯೋಜನೆಯ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ ಬಳಿಕ



ಮಾತನಾಡಿದ ಅವರು, ಹೇಮಾವತಿ ಜಲಾಶಯ ನಿರ್ಮಾಣಕ್ಕಾಗಿ ಭೂಮಿ ಕಳೆದುಕೊಂಡ ರೈತರಿಗೆ ಪರ್ಯಾಯವಾಗಿ ಗಂಜಿಗೆರೆ ಏತ ನೀರಾವರಿ ಯೋಜನೆಯಿಂದ ಭೂಮಿಗೆ ನೀರು ಹರಿಸುವ ಭರವಸೆ ನೀಡಲಾಗಿತ್ತು. ಅಧಿಕಾರಿಗಳು ಹಾಗು ಜನಪ್ರತಿನಿಧಿಗಳು ಇಚ್ಛಾಶಕ್ತಿಯ ಕೊರತೆಯಿಂದ ಗಂಜಿಗೆರೆ ಏತ ನೀರಾವರಿ ಯೋಜನೆ ರೈತರಿಗೆ ಸದ್ಬಳಕೆಯಾಗುವಲ್ಲಿ ಸಾಧ್ಯವಾಗಿಲ್ಲ ಎಂದರು.

ನಾನು ಇಲ್ಲಿ ಬಂದು ನೋಡಿದಾಗ ಎಲೆಕ್ಟ್ರಿಕಲ್, ಪೈಪ್‌ಲೈನ್ ಹಾಗು ಆಯ್ದ ಭಾಗಗಳಲ್ಲಿ ಕಾಲುವೆ ಮುಚ್ಚಿ ಹೋಗಿರುವುದನ್ನು ಗಮನಿಸಿದ್ದೇನೆ. 1999 ರಲ್ಲಿ ನಿರ್ಮಾಣವಾಗಿರುವ ಗಂಜಿಗೆರೆ ಏತ ನೀರಾವರಿ ದುರಸ್ತಿಯಾಗುವುದರಿಂದ ಅಪ್ಪಗೌಡನಹಳ್ಳಿ, ಸಿದ್ದಾಪುರ, ಗಂಜಿಗೆರೆ, ರಾಜಾಪುರ, ಬಸವನಹಳ್ಳಿ, ತಿಪ್ಪೆನಹಳ್ಳಿ, ಮಂಚೇನಹಳ್ಳಿ, ಮಂಚೇನಹಳ್ಳಿ ಕಾಲುವೆ,

» ನಾಲ್ಕನೇ ಪುಟದಲ್ಲಿ

# ಡಾ॥ ಗುರುರಾಜ ಹೆಬ್ಬಾರ್ ಎಂದೆಂದಿಗೂ ಜೀವಂತ

## ಖ್ಯಾತ ವಾಗ್ಮಿ ಪುತ್ತೂರಾಯ ಅಭಿಮತ | ದೇಹದಾನ-ನೇತ್ರದಾನ ನೋಂದಣಿ

• ಪ್ರಜೋದಯ ವರದಿ

**ಹಾಸನ:** ಉಸಿರು ನಿಂತ ಮೇಲೂ ಹೆಸರು ಜನರ ಮನಸ್ಸಿನಲ್ಲಿದೆ ಎಂದರೆ ಅವರು ಜೀವಂತವಾಗಿದ್ದಾರೆಂದರ್ಥ. ಅಂತಹವರ ಸಾಲಿಗೆ ಡಾ॥ ಗುರುರಾಜ ಹೆಬ್ಬಾರ್ ಸೇರುತ್ತಾರೆಂದು ಖ್ಯಾತ ವಾಗ್ಮಿ ಡಾ.ಕೆ.ಪಿ.ಪುತ್ತೂರಾಯ ಅವರು ಹೇಳಿದರು.

ನಗರ ಹೊರವಲಯದ ಚೈತನ್ಯ ಮಂದಿರದಲ್ಲಿ ಗುರುವಾರ ಡಾ॥ ಗುರುರಾಜ ಹೆಬ್ಬಾರ್ ಅವರ ಹುಟ್ಟು ಹಬ್ಬದ ಪ್ರಯುಕ್ತ ಏರ್ಪಡಿಸಿದ್ದ ದೇಹದಾನ-ನೇತ್ರದಾನ ನೋಂದಣಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೆಲವರು ಲವಲವಿಕೆಯಿಂದ ಜೀವಿಸುತ್ತಾರೆ. ಡಾ॥ ಗುರುರಾಜ ಹೆಬ್ಬಾರ್ ಸಕಾರಾತ್ಮಕ ಚಿಂತನೆ ಅಳವಡಿಸಿಕೊಂಡಿದ್ದ ವ್ಯಕ್ತಿ. ಹೆಬ್ಬಾರ್ ಸತ್ತ ಮೇಲೂ ಜೀವಂತವಾಗಿರಬಹುದೆಂಬುದನ್ನು ತೋರಿಸಿದ್ದಾರೆ. ಅತಿಥಿ ಸತ್ಕಾರಕ್ಕೆ ಹೆಸರಾಗಿದ್ದರು. ಮಾನವೀಯ ಚಿಕಿತ್ಸೆ ಮೂಲಕ



ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದ್ದಾರೆಂದರು.

ಸನಾತನ ಜಗತ್ತಿನ ಶ್ರೇಷ್ಠ ಧರ್ಮಗಳಲ್ಲಿ ಒಂದಾಗಿದೆ. ನೀನು ಮಾಡಿದ ಉಪಕಾರ ಮರೆತುಬಿಡು. ಆದರೆ, ಇತರರು ಮಾಡಿದ ಉಪಕಾರ ಮರೆಯಬೇಡವೆಂದು ನಮ್ಮ ಧರ್ಮ ಹೇಳುತ್ತದೆ. ಆ ದಾರಿಯಲ್ಲಿ ಗುರುರಾಜ ಹೆಬ್ಬಾರ್ ಬದುಕಿದ್ದಾರೆ. ಭಗವಂತ ನಮಗೆ ಎರಡು ಆಯ್ಕೆ ಕೊಟ್ಟಿದ್ದಾನೆ. ಒಂದು ಬಿಟ್ಟು ಹೋಗಬೇಕು, ಇಲ್ಲವೇ ಕೊಟ್ಟು ಹೋಗಬೇಕು. ನೇತ್ರದಾನ ಹಾಗು ದೇಹದಾನ ಅತ್ಯಂತ ಶ್ರೇಷ್ಟವಾದುದು. ಯಾವುದೇ ಜಾತಿ, ಧರ್ಮ, ಕುಲ, ಮೇಲು ಕೀಳು ವ್ಯತ್ಯಾಸವಿಲ್ಲದೆ ಎಲ್ಲರೂ ದೇಹದಾನ ಮಾಡಬೇಕು. ಜಾತಿ ನಮ್ಮ ಆದ್ಯತೆ ಇಲ್ಲದ ವಿಷಯ. ಜಾತಿ ಆಧಾರಿತ ಲೆಕ್ಕಾಚಾರವನ್ನು ಸಂಪೂರ್ಣ ತೊಡೆದು ಹಾಕಬೇಕು. ಮನುಷ್ಯ ಜಾತಿ ಒಂದೇ ಸರ್ವಶ್ರೇಷ್ಠವೆಂದು ಪ್ರತಿಪಾದಿಸಿದರು.

ವೇದ ರಚಿಸಿದ ವ್ಯಾಸ್ಯ ಅಂಬಿಗ ಜಾತಿಗೆ ಸೇರಿದರೆ ರಾಮಾಯಣ ಬರೆದ ವಾಲ್ಮೀಕಿ ಬೇಡರ ಜಾತಿಯಲ್ಲಿ ಹುಟ್ಟಿದ್ದ. ಬ್ರಾಹ್ಮಣರು ಆರಾಧಿಸುವ ಶ್ರೀ ಕೃಷ್ಣ ಗೊಲ್ಲರ ಸಮುದಾಯಕ್ಕೆ ಸೇರಿದ್ದಾನೆ. ಹುಟ್ಟಿನಿಂದ ಯಾರೂ ಪರಿಗಣನೆಗೆ ಒಳಪಡುವುದಿಲ್ಲ. ನಮ್ಮ ಪ್ರತಿಭೆ ಹಾಗು ಮಾಡುವ ಕೆಲಸ ನಮ್ಮನ್ನು ಒಂದು ಸ್ಥಾನಮಾನಕ್ಕೆ ಕರೆದೊಯ್ಯುತ್ತವೆಂದರು.

ಜಯದೇವ ಆಸ್ಪತ್ರೆ ಮಕ್ಕಳ ಹೃದ್ರೋಗ ತಜ್ಞೆ ಡಾ॥ ವಿಜಯಲಕ್ಷ್ಮಿ ಐ.ಬಾಳೆಕುಂದ್ರಿ ಅವರು ಮಾತನಾಡಿ, ಸ್ವಂತ ತಂದೆ-ತಾಯಿಯನ್ನು ನೋಡಿಕೊಳ್ಳದ ಸಮಾಜದಲ್ಲಿ ಬೇರೆಯವರನ್ನು ನೋಡಿಕೊಳ್ಳುವುದು ಶ್ರೇಷ್ಠ ಕೆಲಸ. ನಿಜವಾದ ಸೇವೆ ಎಂದರೆ ಅದು ಸಮಾಜ ಸೇವೆ ಎಂದು ಪರಮಶಿವ ಹೇಳಿದ್ದಾನೆ. ಜನ ಸೇವೆಯೇ ಜನಾರ್ಧನ ಸೇವೆ ಎಂಬ ಗಾದೆ ಮಾತಿದೆ. ಡಾ॥ ಗುರುರಾಜ ಹೆಬ್ಬಾರ್ ಅವರು ಆ ನಿಟ್ಟಿನಲ್ಲಿ ಬದುಕಿದ್ದಾರೆಂದರು.

**ಹಣವಂತರಾಗದ ಡಾ॥ ಹೆಬ್ಬಾರ್**

ಪ್ರಾಸ್ತಾವಿಕವಾಗಿ ಮಾತನಾಡಿದ ಹಿಮ್ಸ್ ಪ್ರಾಂಶುಪಾಲ ಡಾ॥ ಬಿ.ಸಿ.ರವಿಕುಮಾರ್ ಅವರು, ಡಾ॥ ಗುರುರಾಜ್ ಹೆಬ್ಬಾರ್ ಹಾಸನದ ಜನಾನುರಾಗಿ, ಸಮಾಜ ಸುಧಾರಕ

» ನಾಲ್ಕನೇ ಪುಟದಲ್ಲಿ

# ಸತ್ಯಮಂಗಲ ಕೆರೆ ಅಂಗಳದಲ್ಲಿ ಪರಿಸರ ಜಾಗೃತಿಗಾಗಿ ಚಿತ್ತಾರ

• ಪ್ರಜೋದಯ ವರದಿ

**ಹಾಸನ:** ಚಿತ್ಕಲಾ ಫೌಂಡೇಷನ್ ಹಾಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ನಗರದ ಸತ್ಯಮಂಗಲ ಕೆರೆ ಆವರಣದಲ್ಲಿ ಗುರುವಾರ ಪರಿಸರ ಜಾಗೃತಿಗಾಗಿ ಚಿತ್ತಾರ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ. ಆರ್.ಕೆಂಚೇಗೌಡ ಅವರು, ಚಿತ್ಕಲಾ ಫೌಂಡೇಷನ್ ಅಧ್ಯಕ್ಷ ಬಿ.ಎಸ್. ದೇಸಾಯಿ ಅವರು ಹಲವು ದಶಕಗಳಿಂದ ಚಿತ್ರಕಲಾ ಕೌಶಲದ ಮೂಲಕ ಪರಿಸರ ಜಾಗೃತಿ ಮೂಡಿಸುತ್ತಿದ್ದಾರೆ. ಚಿತ್ರಕಲಾ ಶಿಕ್ಷಕರಾಗಿ ಹಾಸನದಲ್ಲಿ ನೆಲೆಯೂರಿದ ಅವರು ಕಾರ್ಯಕ್ಷಮತೆಯ ಮೂಲಕ ಉತ್ತಮ ಕಲಾವಿದರಾಗಿ ಗುರುತಿಸಿಕೊಂಡಿ



ದ್ದಾರೆ. ತಮ್ಮದೇಯಾದ ಆತ್ಮೀಯ ಬಳಗ ಸೃಷ್ಟಿಸಿ ಜಿಲ್ಲೆಯ ಪ್ರಾಕೃತಿಕ ಸ್ಥಳ, ಬೆಟ್ಟಗುಡ್ಡ, ಕೆರೆಕಟ್ಟೆಗಳನ್ನು ಸುತ್ತಾಡಿ ಕಲಾ ಕುಂಚದಿಂದ ವಿಶ್ವಕ್ಕೆ ಪರಿಚಯಿಸಿದ್ದಾರೆ. ಹುಣಸಿನಕೆರೆ ಹಾಗು ಅಲ್ಲಿಗೆ ವಿದೇಶಗಳಿಂದ ಬರುವ ಅಪರೂಪದ ಪಕ್ಷಿಗಳನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ದೇಸಾಯಿ ಅವರಿಗೆ ಸಲ್ಲುತ್ತದೆ. ನೂರಾರು ಮಕ್ಕಳಿಗೆ ಚಿತ್ರಕಲೆಯ ತರಬೇತಿ ನೀಡಿ ಉತ್ತಮ ಭವಿಷ್ಯ ಕಟ್ಟಿಕೊಟ್ಟಿದ್ದಾರೆ. ಬಿ.ಎಸ್.ದೇಸಾಯಿ ಅವರ ಪರಿಸರ ಪ್ರಿಯ ಕಾರ್ಯಗಳಿಗೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಬೆಂಬಲವಾಗಿ ಇರುತ್ತದೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ ಅವರ ಮಾತನಾಡಿ, ಜನರಲ್ಲಿ ಪರಿಸರ ಜಾಗೃತಿ ಮೂಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬಿ.ಎಸ್.ದೇಸಾಯಿ ಅಂತಹ ವ್ಯಕ್ತಿ ನಮ್ಮ ಜಿಲ್ಲೆಗೆ ಸಿಕ್ಕಿದ್ದು ಸೌಭಾಗ್ಯ. ಸ್ವಾರ್ಥಕ್ಕಾಗಿ ಏನನ್ನೂ ಮಾಡದೆ ಸಮಾಜಮುಖಿ ಕೆಲಸಗಳ ಮೂಲಕ ಗುರುತಿಸಿಕೊಂಡಿರುವ ಅವರು ಪರಿಸರ ಸಂರಕ್ಷಣೆಗೆ ತಮ್ಮದೇಯಾದ ಕೊಡುಗೆ ನೀಡಿದ್ದಾರೆ ಎಂದರು.

ಪ್ರಾಕೃತಿಕವಾಗಿ ಶ್ರೀಮಂತವಾಗಿರುವ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಉತ್ತೇಜನಕ್ಕೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಆಗ್ರಹಿಸುತ್ತಲೇ ಬಂದಿದ್ದೇವೆ. ಆ ಕೆಲಸವನ್ನು ದೇಸಾಯಿ ಮೌನವಾಗಿ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಚಿತ್ರಕಲೆ ವಿದ್ಯೆ ಕಲಿಸಿ ಮಾದರಿಯಾಗಿದ್ದಾರೆಂದರು.

» ನಾಲ್ಕನೇ ಪುಟದಲ್ಲಿ

## 2 ತಿಂಗಳಿಗೊಮ್ಮೆ ಪೋಷಕರ -ಶಿಕ್ಷಕರ ಸಭೆ ಕಡ್ಡಾಯ

• ಪ್ರಜೋದಯ ವರದಿ

**ಬೆಂಗಳೂರು** : ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ಇನ್ನು ಮುಂದೆ ಎರಡು ತಿಂಗಳಿಗೊಮ್ಮೆ ಪೋಷಕರು, ಶಿಕ್ಷಕರ ಮಹಾಸಭೆ ಆಯೋಜನೆ ಮಾಡುವುದು ಕಡ್ಡಾಯ. ರಾಜ್ಯದ 56 ಸಾವಿರ ಶಾಲಾ-ಕಾಲೇಜುಗಳಲ್ಲಿ ನ.14ರಂದು ಪೋಷಕರು-ಶಿಕ್ಷಕರ ಮಹಾಸಭೆ ಆಯೋಜಿಸಲಾಗಿತ್ತು. ಹೀಗಾಗಿ, ಪ್ರತಿ ಎರಡು ತಿಂಗಳಿಗೆ ಒಂದು ಸಭೆ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ಜ.3 ಹಾಗೂ ಫೆ.28ರಂದು ಮಹಾಸಭೆಗಳನ್ನು ನಿಗದಿ ಮಾಡಲಾಗಿದೆ. 2026-27ನೇ ಶೈಕ್ಷಣಿಕ ಸಾಲಿನಿಂದ ಪ್ರತಿ ಎರಡು ತಿಂಗಳಿಗೆ ಒಂದು ಸಭೆ ನಡೆಸಲಾಗುತ್ತದೆ.

# ಸಂವಿಧಾನ ಕಲ್ಪಿಸಿದ ಹಕ್ಕು ಪಡೆಯಲು ಹೋರಾಟ ಅವಶ್ಯ

• ಪ್ರಜೋದಯ ವರದಿ

**ಸಕಲೇಶಪುರ:** ಡಾ.ಬಿ.ಆರ್. ಅಂಬೇಡ್ಕರ್ ಅವರ ತತ್ವಾದರ್ಶನ ಪಾಲನೆ ಮೂಲಕ ಶೋಷಿತ ಸಮುದಾಯ ಹಕ್ಕುಗಳನ್ನು ಪಡೆಯಲು ಹೋರಾಟ ರೂಪಿಸಬೇಕಿದೆ ಎಂದು ರಾಜ್ಯ ಬೌದ್ಧ ಮಹಾಸಭಾ ರಾಜ್ಯಾಧ್ಯಕ್ಷ ಸಿದ್ದರಾಜು ಅವರು ಹೇಳಿದರು.

ಪಟ್ಟಣದ ಹಳೆಯ ಬಸ್ ನಿಲ್ದಾಣ ಸಮೀಪ ಗುರುವಾರ ಹಮ್ಮಿಕೊಂಡಿದ್ದ ಭೀಮಾ ಕೋರೇಗಾಂವ್ ವಿಜಯೋತ್ಸವದಲ್ಲಿ ಮಾತನಾಡಿದ ಅವರು, ಯುವ ಜನಾಂಗ ಅಂಬೇಡ್ಕರ್ ಅವರ ಪ್ರತಿಯೊಂದು ನಡೆ-ನುಡಿಯನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದರು.

ಕೋರೇಗಾಂವ್ ಯುದ್ಧ ಅಸ್ಪೃಶ್ಯತೆಯ ವಿರುದ್ಧ ನಡೆದ ಮೊದಲ ಹೋರಾಟವಾಗಿದೆ. ಬಹುಜನರ ಇತಿಹಾಸವನ್ನು ಬರೆಯದೇ ಇರುವುದು



ದುರಂತ. ಶಿಕ್ಷಣದಿಂದ ಮಾತ್ರ ಶೋಷಿತ ಸಮಾಜ ಸುಧಾರಣೆಯಾಗಲಿದೆ ಎಂದು ಅಂಬೇಡ್ಕರ್ ಪ್ರತಿಪಾದಿಸಿದ್ದರು. ಮನುಸ್ಮೃತಿಯನ್ನು ಜೀವನಪೂರ್ಣ ವಿರೋಧಿಸಿದ ಅಂಬೇಡ್ಕರ್ ಮಹಾ ಮಾನವತಾವಾದಿಯಾಗಿದ್ದರು. ಶಿಕ್ಷಣವಿಲ್ಲದ ಮನುಷ್ಯ ಪಶುವಿಗೆ ಸಮಾನ. ಆದ್ದರಿಂದ ಯಾರೂ ವಿದ್ಯಾಭ್ಯಾಸದಿಂದ ವಂಚಿತರಾಗಬಾರದೆಂದರು. ಇಂದು ಅಂಬೇಡ್ಕರ್ ರಚಿಸಿದ ಸಂವಿಧಾನದ ಬದಲಾಗಿ ಮನುಸ್ಮೃತಿಯನ್ನು ಜಾರಿಗೊಳಿಸುವ ಹುನ್ನಾರ ಹೆಚ್ಚುತ್ತಿದೆ. ಈ ಬಗ್ಗೆ ಶೋಷಿತ ಸಮಾಜ ಎಚ್ಚರಿಕೆಯಿಂದ ಇರಬೇಕು. ಜಾತಿ ದೇಶಕ್ಕೆ ಮಾರಕ ಎನ್ನುವುದಾದರೆ ಜಾತಿಯನ್ನು ಅನುಸರಿಸುವ ವ್ಯಕ್ತಿಯೂ ಅಪಾಯಕಾರಿಯೇ. ಅಂತಹವರ ಸಂಖ್ಯೆ ಕಡಿಮೆಯಾಗಬೇಕೆಂದರು.

ಲೇಖಕಿ ಅನುಪಮಾ ಅವರು ಮಾತನಾಡಿ, ಶೋಷಿತ ಸಮಾಜ

» ನಾಲ್ಕನೇ ಪುಟದಲ್ಲಿ

## ಕೋಗಿಲು ಬಡಾವಣೆ ವಿವಾದ: ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಕೆ

• ಪ್ರಜೋದಯ ವರದಿ

**ಬೆಂಗಳೂರು:** ಯಲಹಂಕ ಬಳಿಯ ಕೋಗಿಲು ಬಡಾವಣೆಯಲ್ಲಿ ಅನಧಿಕೃತ ಮನೆಗಳ ತೆರವು ಪ್ರಕರಣ ಸಂಬಂಧ ಹೈಕೋರ್ಟ್‌ಗೆ ಗುರುವಾರ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಕೆಯಾಗಿದೆ. ಮನೆ ಕಳೆದುಕೊಂಡಿರುವ ಜನರಿಗೆ ಪುನರ್ವಸತಿ ಮತ್ತು ಪರಿಹಾರ ನೀಡಬೇಕೆಂದು ಕೋರಿ ಜೈಬಾ ತಬಸ್ಸುಮ್ ಹಾಗು ಮತ್ತಿತರರು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದು, ಹಲವು ಬೇಡಿಕೆಗಳನ್ನು ನ್ಯಾಯಾಲಯದ ಮುಂದಿಟ್ಟಿದ್ದಾರೆ.

ಕಳೆದ 30 ವರ್ಷಗಳಿಂದ 3 ಸಾವಿರ ಜನರು ವಾಸಿಸುತ್ತಿದ್ದಾರೆ. ವಸೀಂ, ಫಕೀರ್ ಕಾಲೋನಿಗಳ ತೆರವಿನಿಂದ ನಿರಾಶ್ರಿತರಾಗಿದ್ದು, ಅವರಿಗೆ ಎಸ್‌ಡಿಪಿಐ, ಎಂಐಎಂ ಪಕ್ಷಗಳು ನೆರವು ಒದಗಿಸುತ್ತಿವೆ. ಸರ್ಕಾರ ಸಂತ್ರಸ್ತರಿಗೆ 5 ಕಿ.ಮೀ. ಅಂತರದಲ್ಲೇ ಮರುವಸತಿ ಕಲ್ಪಿಸಬೇಕು ಮತ್ತು ಅಲ್ಲಿವರೆಗೆ 3 ಹೊತ್ತಿನ ಪೌಷ್ಟಿಕಾಂಶಯುತ ಆಹಾರ ಒದಗಿಸಬೇಕೆಂದು ಕೋರಲಾಗಿದೆ.

## ಟ್ರಾಫಿಕ್ ಸಮಸ್ಯೆ, ಕಳ್ಳತನ-ದರೋಡೆ, ಗಾಂಜಾ, ಪುಡಿರೌಡಿಗಳ ಹಾವಳಿಗೆ ಹಾಕಬೇಕಿದೆ ಬ್ರೇಕ್

# ನೂತನ ಪೊಲೀಸ್ ವರಿಷ್ಠಾಧಿಕಾರಿ ಎದುರು ಹಲವು ಸವಾಲು

• ಪ್ರಜೋದಯ ವರದಿ

**ಹಾಸನ** : ಜಿಲ್ಲೆಯಲ್ಲಿ ದಿನೇ ದಿನೇ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಟ್ರಾಫಿಕ್ ಸಮಸ್ಯೆ, ಕಳ್ಳತನ-ದರೋಡೆ, ಗಾಂಜಾ, ಪುಡಿರೌಡಿಗಳ ಹಾವಳಿ ನಿಯಂತ್ರಣಕ್ಕೆ ತರುವ ಗುರುತರ ಜವಾಬ್ದಾರಿ ಹಾಗು ಸವಾಲು ಹೊಸದಾಗಿ ಜಿಲ್ಲೆಗೆ ಬಂದಿರುವ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರ ಮೇಲಿದೆ.

ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಲ್ಲಿ ಕಳ್ಳತನ, ಹೊಡೆದಾಟ, ಪುಡಿರೌಡಿಗಳ ಹಾವಳಿ ಹೆಚ್ಚಾಗಿತ್ತು. ಈ ಹಿಂದೆ ಇದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರು ನಿರೀಕ್ಷಿತ ಮಟ್ಟದಲ್ಲಿ ಕಾನೂನು ಸುವ್ಯವಸ್ಥೆ ಹದ್ದುಬಸ್ತಿಗೆ ತರುವಲ್ಲಿ ಕ್ರಮವಹಿಸದ ಬಗ್ಗೆ ಜಿಲ್ಲೆಯ ಜನಪ್ರತಿನಿಧಿಗಳು, ಸಾರ್ವಜನಿಕರು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದರು. ಪೊಲೀಸ್ ಇಲಾಖೆ ವೈಫಲ್ಯದ ವಿರುದ್ಧ ಪ್ರತಿಭಟನೆಗಳು ಕೂಡ ನಡೆದಿದ್ದವು. ಇದೀಗ ಹಿಂದಿನ ಪೊಲೀಸ್ ವರಿಷ್ಠಾಧಿಕಾರಿ ವರ್ಗಾವಣೆಗೊಂಡು ಹೊಸ ಅಧಿಕಾರಿ ಬಂದಿರುವುದರಿಂದ ಈ ಎಲ್ಲಾ ಸವಾಲುಗಳನ್ನು ಯಾವ ರೀತಿ ಎದುರಿಸಲಿದ್ದಾರೆ ಎಂಬುದನ್ನು ಜಿಲ್ಲೆಯ ಜನರು ಎದುರು ನೋಡುತ್ತಿದ್ದಾರೆ.

ಜಿಲ್ಲೆ ರಾಜಕೀಯಕ್ಕೆ ಹೆಚ್ಚು ಪ್ರಸಿದ್ಧಿ ಪಡೆದುಕೊಂಡಿದೆ. ಹೀಗಾಗಿ ಮೂರು ರಾಜಕೀಯ ಪಕ್ಷದ ಮುಖಂಡರು, ಶಾಸಕರು, ಮಾಜಿ ಸಚಿವರನ್ನು ಸಂಭಾಳಿಸುವುದು ಕೂಡ ಮತ್ತೊಂದು ಸವಾಲಾಗಿದೆ.

ನಗರದ ಎನ್.ಆರ್.ವೃತ್ತ, ಬಿ.ಎಂ.ರಸ್ತೆ, ನಗರ ಸಾರಿಗೆ ಮತ್ತು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಸಾಲಗಾಮೆ ರಸ್ತೆ, ಆರ್.ಸಿ.ರಸ್ತೆ, ಎಂ.ಜಿ.ರಸ್ತೆ, ಶಂಕರಮಠ ರಸ್ತೆ, ಸಂಪಿಗೆ ರಸ್ತೆ, 80 ಅಡಿ ರಸ್ತೆ ಸೇರಿ ಅನೇಕ ಕಡೆಗಳಲ್ಲಿ ಸಂಚಾರ ದಟ್ಟಣೆ ವ್ಯಾಪಕವಾಗಿದೆ.

ಪಾರ್ಕಿಂಗ್ ವ್ಯವಸ್ಥೆ ಇಲ್ಲದೆ ಬೇಕಾಬಿಟ್ಟಿಯಾಗಿ ವಾಹನಗಳನ್ನು ನಿಲ್ಲಿಸಲಾಗುತ್ತಿದೆ. ನಗರದಲ್ಲಿ ಟ್ರಾಫಿಕ್ ಪೊಲೀಸರು ದಂಡ ವಸೂಲಿಗೆ ಮಾತ್ರ ಸೀಮಿತವಾಗಿದ್ದಾರೆ ಎನ್ನುವಂತಾಗಿದೆ. ಆಸ್ಪತ್ರೆಗಳೇ ಹೆಚ್ಚಿರುವ ಶಂಕರಮಠ ಮತ್ತು ಸಂಪಿಗೆ ರಸ್ತೆಯಲ್ಲಿ ಪಾರ್ಕಿಂಗ್‌ಗೆ ಸೂಕ್ತ ಸ್ಥಳಾವಕಾಶವಿಲ್ಲದೆ ಸಾರ್ವಜನಿಕರು ಸಮಸ್ಯೆ ಎದುರಿಸುತ್ತಿದ್ದಾರೆ. ನಗರದಲ್ಲಿ ಹದಗೆಟ್ಟಿರುವ ಟ್ರಾಫಿಕ್ ಸಮಸ್ಯೆಗೆ ಮುಕ್ತಿ ಕಾಣಿಸಲು ನೂತನ ಪೊಲೀಸ್ ವರಿಷ್ಠಾಧಿಕಾರಿಗಳು ತುರ್ತು ಕ್ರಮ ಕೈಗೊಳ್ಳಬೇಕಿದೆ.



ಜಿಲ್ಲೆಯಲ್ಲಿ ಆಗಾಗ್ಗೆ ಗ್ಯಾಂಗ್ ವಾರ್, ಪುಡಿರೌಡಿಗಳ ಹಾವಳಿ, ಕ್ಷುಲ್ಲಕ ಕಾರಣಕ್ಕೆ ಮಾರಾಮಾರಿ, ಗುಂಪು ಘರ್ಷಣೆ ನಡೆಯುತ್ತಿರುವುದಕ್ಕೆ ಕಡಿವಾಣ ಹಾಕುವ ಅಗತ್ಯವಿದೆ. ರೌಡಿಶೀಟರ್‌ಗಳು, ಪುಡಿರೌಡಿಗಳ ನಡುವಿನ ವೈಯಕ್ತಿಕ ದ್ವೇಷಕ್ಕೆ ಕೊಲೆಗಳು, ಕೊಲೆಗೆ ಯತ್ನದಂತಹ ಪ್ರಕರಣ ನಡೆದಿವೆ. 2025 ನೇ ಸಾಲಿನಲ್ಲಿ 35ಕ್ಕೂ ಹೆಚ್ಚು ಕೊಲೆಗಳು ಜಿಲ್ಲೆಯಲ್ಲಿ ನಡೆದಿದ್ದು, ಪುಡಿರೌಡಿಗಳ ಅಟ್ಟಹಾಸ ನಿಯಂತ್ರಿಸಬೇಕಿದೆ. ಕೆಲ ಪುಂಡರು ಬೈಕ್ ವ್ಹಿಲೀಂಗ್ ಮಾಡುತ್ತಾ ಹುಚ್ಚಾಟ ಮೆರೆಯುತ್ತಿದ್ದು, ಕಡಿವಾಣ ಹಾಕಬೇಕಿದೆ.

**ಜನಸ್ನೇಹಿ ಪೊಲೀಸ್ ವ್ಯವಸ್ಥೆಗೆ ಬೇಕಿದೆ ಒತ್ತು**

ಪೊಲೀಸ್ ಠಾಣೆಗಳಿಗೆ ಹೋಗಲು ಇನ್ನೂ ಜನಸಾಮಾನ್ಯರು ಭಯಪಡುವ ಸ್ಥಿತಿ ಇದೆ. ಜನಸ್ನೇಹಿ ಪೊಲೀಸ್ ವ್ಯವಸ್ಥೆ ಕೇವಲ ಬಾಯಿ ಮಾತಾಗಿದೆ. ಉಳ್ಳವರು, ಪ್ರಭಾವಶಾಲಿಗಳಿಗೆ ಪೊಲೀಸರು ಮಣೆ ಹಾಕುತ್ತಾರೆಂಬ ಅಪವಾದವಿದೆ. ನೂತನ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರು ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕಿದೆ.

## ಹೆಚ್ಚಾಗುತ್ತಿದೆ ಗಾಂಜಾ ಅಮಲು

ಜಿಲ್ಲಾದ್ಯಂತ ಗಾಂಜಾ ಪ್ರಕರಣಗಳು ಹೆಚ್ಚಾಗುತ್ತಿವೆ. ಹೊರ ರಾಜ್ಯಗಳಿಂದ ಗಾಂಜಾ ತಂದು ಜಿಲ್ಲೆಯಲ್ಲಿ ಮಾರಾಟ ಮಾಡುತ್ತಿರುವ ಸಾಕಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ. ಮಲೆನಾಡು ಭಾಗದಲ್ಲಿ ಅಕ್ರಮ ಗಾಂಜಾ ಮಾರಾಟ ಮಾಡಲಾಗುತ್ತಿದೆ. 2025ನೇ ಸಾಲಿನಲ್ಲಿ ಒಟ್ಟು 135 ಕೆ.ಜಿ. ಗಾಂಜಾವನ್ನು ಪೊಲೀಸರು ವಶಪಡಿಸಿಕೊಂಡು ನಾಶಪಡಿಸಿದ್ದಾರೆ. ಪ್ರತಿ ದಿನವೂ ಒಂದಲ್ಲ ಒಂದು ಠಾಣೆಯಲ್ಲಿ ಗಾಂಜಾ ಪ್ರಕರಣ ದಾಖಲಾಗುತ್ತಿವೆ. ಬುಧವಾರವಷ್ಟೇ ಗಾಂಜಾ ಸೇವನೆ ಮಾಡಿದ್ದ 10 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

# ಬೊಲೆರೋ ಉರುಳಿ ಮೂವರ ಸಾವು

• ಪ್ರಜೋದಯ ವರದಿ

ಅರಸೀಕೆರೆ : ಬೊಲೆರೋ ಪಿಕಪ್ ಮಗುಚಿಕೊಂಡ ಪರಿಣಾಮ ಮೂರು ಜನರು ಮೃತಪಟ್ಟು, ಇಬ್ಬರು ಗಾಯಗೊಂಡ ಘಟನೆಯು ಬಾಣಾವರ ಹೋಬಳಿಯ ಚಿಕ್ಕಾರಹಳ್ಳಿ ಗ್ರಾಮದ ಸಮೀಪ ಗುರುವಾರ ಸಂಜೆ ಸಂಭವಿಸಿದೆ.

ಈ ಅಪಘಾತದಲ್ಲಿ ಬೊಲೆರೋದಲ್ಲಿದ್ದ ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ತಂಗ್ಲಿ ಗ್ರಾಮದ ಶಬ್ಬೀರ್ (55), ತಿಮ್ಮಣ್ಣ (53) ಹಾಗು ಸಂಜಯ್ (45) ಎಂಬುವವರು ಪ್ರಾಣ ಕಳೆದುಕೊಂಡಿದ್ದಾರೆ. ಗಾಯಗೊಂಡಿರುವ ಹಾಸನದ ನಿವಾಸಿ ನೌಶದ್ ಹಾಗು ಮತ್ತೊಬ್ಬರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮೃತರು ಹಾಸನ ಸಮೀಪ ಅಡಿಕೆ ಕೊಯ್ಲು ಮಾಡಿಕೊಂಡು ಚಿಕ್ಕಮಗಳೂರಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ಬೊಲೆರೋ ಪಿಕಪ್ ವಾಹನದ ಟೈಯರ್ ಒಡೆದು ಹೋದದ್ದರಿಂದ ಮಗುಚಿಕೊಂಡು ಬಿದ್ದ ಪರಿಣಾಮ ಈ ಅನಾಹುತ ನಡೆದಿದ್ದು, ಅಡಿಕೆ ತುಂಬಿದ್ದ ಚೀಲಗಳು ಹಾಗು ಅಪಘಾತದಲ್ಲಿ ಮೃತಪಟ್ಟವರ ಶವಗಳು ರಸ್ತೆಯ ಮೇಲೆ ಬಿದ್ದಿದ್ದವು. ಬಾಣಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಪ್ರಜೋದಯ
E-mail : prajodayahsn@gmail.com
02 ಜನವರಿ 2026 ಶುಕ್ರವಾರ

# ಸಿನಿ ಪ್ರಜಾ

# 2026ರಲ್ಲಿ ಬಹಳ ನಿರೀಕ್ಷೆ ಹುಟ್ಟಾಕಿರುವ ಕನ್ನಡ ಸಿನಿಮಾಗಳು ಯಾವುವು?



ಮತ್ತೊಂದು ಹೊಸ ವರ್ಷ ಕನ್ನಡ ಚಿತ್ರರಂಗಕ್ಕೆ ಹೊಸ ಹುರುಪು ಹೊತ್ತು ಬರ್ತಿದೆ. ಕಳೆದ ವರ್ಷ ಕನ್ನಡ ಚಿತ್ರರಂಗಕ್ಕೆ ಸಿಹಿ ಕಹಿ ಎರಡೂ ಸಿಕ್ಕಿತ್ತು. 200ಕ್ಕೂ ಅಧಿಕ ಸಿನಿಮಾಗಳಲ್ಲಿ ನಾಲ್ಕೈದು ಚಿತ್ರಗಳು ಮಾತ್ರ ಗೆದ್ದಿತ್ತು. 2026ರಲ್ಲಿ ಕನ್ನಡ ಸಿನಿಮಾಗಳ ಗೆಲುವು ಮತ್ತಷ್ಟು ಜೋರಾಗಿ ಇರಲಿ ಎಂದು ಆಶಿಸೋಣ.

ಈ ವರ್ಷ ಸಾಕಷ್ಟು ಬಹುನಿರೀಕ್ಷಿತ ಸಿನಿಮಾಗಳು ಪ್ರೇಕ್ಷಕರ ಮುಂದೆ ಬರ್ತಿವೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಕೆಲ ಸಿನಿಮಾಗಳು ಸದ್ದು ಮಾಡಲು ಅಣಿಯಾಗಿವೆ. ಟಾಕ್ಸಿಕ್ ಹಾಗೂ ರಾಮಾಯಣ ಸಿನಿಮಾಗಳ ಮೇಲೆ ಭಾರೀ ನಿರೀಕ್ಷೆಯಿದೆ. ನಿತೇಶ್ ತಿವಾರಿ ನಿರ್ದೇಶನದ ರಾಮಾಯಣ ಕನ್ನಡದ ಸಿನಿಮಾ ಅಲ್ಲದೇ ಇದ್ದರೂ ಯಶ್ ಚಿತ್ರಕ್ಕೆ ಬಂಡವಾಳ ಹೂಡಿ ರಾವಣನ ಪಾತ್ರದಲ್ಲಿ ನಟಿಸಿರುವುದು ಕುತೂಹಲ ಮೂಡಿದೆ. ಕನ್ನಡಕ್ಕೂ ಸಿನಿಮಾ ಡಬ್ ಆಗಿ ಬರಲಿದೆ.

2025ರಲ್ಲಿ ಕನ್ನಡದ ಕೆಲ ಸ್ಟಾರ್ ನಟರ ಸಿನಿಮಾಗಳು ಬಿಡುಗಡೆ ಆಗಲೇಯಿಲ್ಲ. ಈ ವರ್ಷ ಕೂಡ ಕೆಲವರು ಚಿತ್ರಮಂದಿರಗಳಿಂದ ದೂರವೇ ಉಳಿಯಲಿದ್ದಾರೆ. ಇನ್ನು ಮುಂದಿನ 365 ದಿನಗಳಲ್ಲಿ 200ಕ್ಕೂ ಅಧಿಕ ಕನ್ನಡ ಸಿನಿಮಾಗಳು ಬಿಡುಗಡೆ ಆಗುವುದರಲ್ಲಿ ಅಚ್ಚರಿಯಿಲ್ಲ. ನಿರೀಕ್ಷೆ ಹುಟ್ಟಾಕ್ಕಿರುವ ಸಿನಿಮಾಗಳ ಪಟ್ಟಿ ಇಲ್ಲಿದೆ ನೋಡಿ.

**1. ಟಾಕ್ಸಿಕ್:** ಯಶ್ ನಿರ್ಮಿಸಿ ನಟಿಸಿರುವ ಟಾಕ್ಸಿಕ್ ಸಿನಿಮಾ ಮಾರ್ಚ್ 19ಕ್ಕೆ ತೆರೆಗೆ ಬರಲಿದೆ. ಗೀತು ಮೋಹನ್‌ದಾಸ್ ನಿರ್ದೇಶನದ ಚಿತ್ರದಲ್ಲಿ ಘಟಾನುಘಟಿ ಕಲಾವಿದರು ನಟಿಸಿದ್ದಾರೆ. ಈಗಾಗಲೇ ಯಶ್, ಕಿಯಾರಾ ಅದ್ವಾನಿ, ನಯನತಾರಾ, ಹುಮಾ ಖುರೇಷಿ ಲುಕ್ ರಿವೀಲ್ ಆಗಿದೆ. ನಿರ್ದೇಶಕಿ ಜೊತೆ ಸೇರಿ ಯಶ್ ಕೂಡ ಚಿತ್ರಕ್ಕೆ ಕಥೆ, ಚಿತ್ರಕಥೆ ಸಿದ್ಧಪಡಿಸಿದ್ದಾರೆ. ರವಿ ಬಸ್ರೂರು ಸಂಗೀತ ಚಿತ್ರಕ್ಕಿದೆ. ಈದ್ ಸಂಭ್ರಮದಲ್ಲಿ ಬಾಲಿವುಡ್ ಧುರಂಧರ್- 2 ಎದುರು ಕನ್ನಡದ ಟಾಕ್ಸಿಕ್ ಸಿನಿಮಾ ಬಿಡುಗಡೆ ಆಗಲಿದೆ.

**2. ಕೆಡಿ:** ಜೋಗಿ ಪ್ರೇಮ್ ನಿರ್ದೇಶನದ ಕೆಡಿ ಚಿತ್ರದಲ್ಲಿ ಧ್ರುವ ಸರ್ಜಾ ನಟಿಸಿದ್ದಾರೆ. ಕಾರಣಾಂತರಗಳಿಂದ ಈ ಆಕ್ಷನ್ ಥ್ರಿಲ್ಲರ್ ಸಿನಿಮಾ ಬಿಡುಗಡೆ ತಡವಾಗ್ತಿದೆ. ಏಪ್ರಿಲ್ 28ರಂದು ಸಿನಿಮಾ ತೆರೆಗೆ ತರಲು ಚಿತ್ರತಂಡ ಮುಂದಾಗಿದೆ. ಅಧಿಕೃತವಾಗಿ ಈ ಬಗ್ಗೆ ಮಾಹಿತಿ ಸಿಕ್ಕಿದೆ. ಚಿತ್ರದ ಟೀಸರ್, ಸಾಂಗ್ಸ್ ಹಿಟ್ ಆಗಿದೆ. ಸಂಜಯ್ ದತ್, ರವಿಚಂದ್ರನ್, ಶಿಲ್ಪಾ ಶೆಟ್ಟಿ ಸೇರಿ ದೊಡ್ಡ ತಾರಾಗಣ ಚಿತ್ರದಲ್ಲಿದೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಸಿನಿಮಾ ತೆರೆಗಪ್ಪಳಿಸಲಿದೆ.

**3. ಲ್ಯಾಂಡ್‌ಲಾರ್ಡ್:** ಭೀಮ ಬಳಿಕ ದುನಿಯಾ ವಿಜಯ್ ನಟನೆಯ ಲ್ಯಾಂಡ್‌ಲಾರ್ಡ್ ಸಿನಿಮಾ ನಿರೀಕ್ಷೆ ಹುಟ್ಟಾಕ್ಕಿದೆ. ಈಗಾಗಲೇ ಚಿತ್ರದ ಟೀಸರ್ ಹಾಗೂ ಒಂದು ಸಾಂಗ್ ರಿಲೀಸ್ ಆಗಿ ಗಮನ ಸೆಳೆದಿದೆ. ಚಿತ್ರದಲ್ಲಿ ರಚಿತಾ ರಾಮ್ ನಾಯಕಿಯಾಗಿ ಮಿಂಚಿದ್ದಾರೆ. ಕೋಲಾರದ ಹಳ್ಳಿಯೊಂದರ ಹಿನ್ನೆಲೆಯಲ್ಲಿ ಚಿತ್ರದ ಕಥೆ ಕಟ್ಟಿಕೊಡಲಾಗಿದೆ. ಅಜನೀಶ್ ಲೋಕನಾಥ್ ಸಂಗೀತ ಚಿತ್ರಕ್ಕಿದ್ದು ಜನವರಿ 23ಕ್ಕೆ ಸಿನಿಮಾ ತೆರೆಗೆ ಬರಲಿದೆ.



**4. ಉತ್ತರಕಾಂಡ:** ರೋಹಿತ್ ಪದಕಿ ನಿರ್ದೇಶನದಲ್ಲಿ ಧನಂಜಯ್ ನಟನೆಯ ಉತ್ತರಕಾಂಡ ಸಿನಿಮಾ ಚಿತ್ರೀಕರಣ ಅರ್ಧಕ್ಕೆ ನಿಂತಿದೆ. ಚಿತ್ರದಲ್ಲಿ ಶಿವರಾಜ್‌ಕುಮಾರ್ ಮುಖ್ಯವಾದ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಶೀಘ್ರದಲ್ಲೇ ಸಿನಿಮಾ ಚಿತ್ರೀಕರಣ ಪುನರಾರಂಭ ಮಾಡುವ ಸಾಧ್ಯತೆಯಿದೆ. ಉತ್ತರ ಕರ್ನಾಟಕದ ಹಿನ್ನೆಲೆಯ ಚಿತ್ರಕ್ಕೆ ಕೆಆರ್‌ಜಿ ಸ್ಟುಡಿಯೋಸ್ ಸಂಸ್ಥೆ ಬಂಡವಾಳ ಹೂಡಿದೆ. ಎಲ್ಲಾ ಅಂದುಕೊಂಡಂತೆ ಆಗಿಬಿಟ್ರೆ, ವರ್ಷಾಂತ್ಯಕ್ಕೆ ಸಿನಿಮಾ ತೆರೆಗೆ ಬರಲಿದೆ.

**5. ಬಿಲ್ಲ ರಂಗ ಬಾಷ:** ವಿಕ್ರಾಂತ್ ರೋಣ ಬಳಿಕ ಅನೂಪ್ ಭಂಡಾರಿ ಜೊತೆ ಸುದೀಪ್ ಮತ್ತೆ ಕೈಜೋಡಿಸಿದ್ದಾರೆ. ಇವರಿಬ್ಬರ ಕಾಂಬಿನೇಷನ್‌ನಲ್ಲಿ ಬಿಲ್ಲ ರಂಗ ಬಾಷ ಸಿನಿಮಾ ಒಂದು ಶೆಡ್ಯೂಲ್ ಮುಗಿದಿದೆ. ಈ ವರ್ಷವೇ ಚಿತ್ರ ತೆರೆಗೆ ಬರುತ್ತಾ ಎಂದು ಹೇಳುವುದು ಕಷ್ಟ. ಆದರೆ ಡಿಸೆಂಬರ್ 25ಕ್ಕೆ ಮತ್ತೊಂದು ಸಿನಿಮಾ ಬಿಡುಗಡೆ ಮಾಡುವುದಾಗಿ ಹೇಳಿ ಕಿಚ್ಚ ಸುದೀಪ್ ಕುತೂಹಲ ಮೂಡಿಸಿದ್ದಾರೆ.

**6. ಸೂರಿ-ಯುವ ಸಿನಿಮಾ:** ದುನಿಯಾ ಸೂರಿ ನಿರ್ದೇಶನದಲ್ಲಿ ಯುವರಾಜ್‌ಕುಮಾರ್ ನಟನೆಯ ಸಿನಿಮಾ ಸೆಟ್ಟೇರಿದೆ. ಕಾರಣಾಂತರಗಳಿಂದ ಸಿನಿಮಾ ತಡವಾಗ್ತಿದೆ. ಈ ವರ್ಷವೇ ಸಿನಿಮಾ ಚಿತ್ರೀಕರಣ ನಡೆದು ತೆರೆಗೆ ಬಂದರೂ ಅಚ್ಚರಿ ಪಡಬೇಕಿಲ್ಲ. ಸೂರಿ- ಯುವ ಕಾಂಬೋ ಸಿಕ್ಕಾಪಟ್ಟೆ ಹೈಪ್ ಕ್ರಿಯೇಟ್ ಮಾಡಿದೆ.

**7. 666 ಆಪರೇಷನ್ ಡ್ರೀಮ್ ಥಿಯೇಟರ್:** ಹೇಮಂತ್ ರಾವ್ ನಿರ್ದೇಶನದಲ್ಲಿ ಧನಂಜಯ್ ಹಾಗೂ ಶಿವಣ್ಣ ನಟನೆಯ 666 ಆಪರೇಷನ್ ಡ್ರೀಮ್ ಥಿಯೇಟರ್ ಸಿನಿಮಾ ಕೂಡ ಕುತೂಹಲ ಹುಟ್ಟಾಕ್ಕಿದೆ. ರೆಟ್ರೋ ಸ್ಟೈಲ್‌ನಲ್ಲಿ ಸಿನಿಮಾ ಕಟ್ಟಿಕೊಡಲಾಗ್ತಿದೆ. ವೈಶಾಕ್ ಜೆ ಫಿಲ್ಮ್ಸ್ ಸಂಸ್ಥೆ ಚಿತ್ರಕ್ಕೆ ಹಣ ಹಾಕಿದೆ. ಈ ವರ್ಷವೇ ಸಿನಿಮಾ ತೆರೆಗೆ ಬರುವ ನಿರೀಕ್ಷೆಯಿದೆ.

ಇನ್ನುಳಿದಂತೆ ಗಣೇಶ್, ರಮೇಶ್ ಅರವಿಂದ್ ಜೋಡಿಯ ಯುವರ್ಸ್ ಸಿನ್ಸಿಯರ್ಲಿ ರಾಮ್, ಪ್ರಜ್ವಲ್ ದೇವರಾಜ್ ನಟನೆಯ ಕರಾವಳಿ, ದುನಿಯಾ ವಿಜಯ್ ನಿರ್ದೇಶನದ ಸಿಟಿಲೈಟ್ಸ್ ಹೀಗೆ ಒಂದಷ್ಟು ಸಿನಿಮಾಗಳು ನಿರೀಕ್ಷೆ ಹುಟ್ಟಾಕ್ಕಿದೆ. ಇದೆಲ್ಲ ನಿರೀಕ್ಷೆ ಹುಟ್ಟಾಕ್ಕಿರುವ ಸಿನಿಮಾಗಳ ಕಥೆ ಆಯ್ತು. ರಿಷಬ್ ಶೆಟ್ಟಿ ರಕ್ಷಿತ್ ಶೆಟ್ಟಿ, ಶ್ರೀಮುರಳಿ ಸೇರಿದಂತೆ ಕೆಲ ಸ್ಟಾರ್ ನಟರ ಸಿನಿಮಾಗಳು ಈ ವರ್ಷ ತೆರೆಗೆ ಬರುವುದು ಅನುಮಾನ.

## 02-01-2026 ದಿನ ಭವಿಷ್ಯ

**ಮೇಷ:** ನಿಮ್ಮ ಹೆಚ್ಚು ಆತ್ಮವಿಶ್ವಾಸವನ್ನು ಇಂದು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಒತ್ತಡದ ದಿನದ ಹೊರತಾಗಿಯೂ ನೀವು ನಿಮ್ಮ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ. ನಿಮ್ಮ ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಮತ್ತು ಇಂದು ತುಂಬಾ ಖರ್ಚು ಮಾಡಬೇಡಿ. ಒಬ್ಬ ಸ್ನೇಹಿತ ತನ್ನ ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಿಮ್ಮ ಸಲಹೆ ಪಡೆದುಕೊಳ್ಳುತ್ತಾರೆ.

**ವೃಷಭ:** ನಿಮ್ಮ ಒತ್ತಡ ನಿವಾರಿಸಲು ಕುಟುಂಬದ ಸದಸ್ಯರ ಬೆಂಬಲ ಪಡೆಯಿರಿ. ಅವರ ಸಹಾಯವನ್ನು ಗೌರವದಿಂದ ಸ್ವೀಕರಿಸಿ. ನೀವು ಭಾವನೆಗಳು ಮತ್ತು ಒತ್ತಡಗಳನ್ನು ಒಳಗೆ ಅದುಮಿಡಬಾರದು. ಆಗಾಗ ನಿಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳುವುದು ಸಹಾಯ ಮಾಡುತ್ತದೆ. ನೀವು ಕೆಲಸದಲ್ಲಿ ಅಭಿನಂದನೆಗಳನ್ನು ಪಡೆಯಬಹುದು.

**ಮಿಥುನ:** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಪೂರ್ತಿ ದಿನ ನೀವು ಹಣದ ಬಗ್ಗೆ ಹೋರಾಟ ಮಾಡುತ್ತಿದ್ದೀರಿ, ಆದರೆ ಸಂಜೆಯ ಸಮಯದಲ್ಲಿ ನೀವು ಹಣದ ಲಾಭವನ್ನು ಪಡೆಯಬಹುದು. ದಿನ ನಿಕಟ ಸಂಬಂಧಿಗಳು ಅಥವಾ ಸ್ನೇಹಿತರಿಂದ ಉತ್ತಮ ಸುದ್ದಿಯೊಡನೆ ಆರಂಭವಾಗುತ್ತದೆ. ಪ್ರೀತಿ ಯಾವಾಗಲೂ ಭಾವಪೂರ್ಣವಾಗಿದೆ.

**ಕರ್ಕಾಟಕ:** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಇಂದು ಮಾಡಿದ ಹೂಡಿಕೆ ನಿಮ್ಮ ಅಭ್ಯುದಯ ಮತ್ತು ಆರ್ಥಿಕ ಭದ್ರತೆಯನ್ನು ಹೆಚ್ಚಿಸುತ್ತದೆ. ನಿಮ್ಮ ಸಂತೋಷವನ್ನು ನಿಮ್ಮ ಪೋಷಕರ ಜೊತೆ ಹಂಚಿಕೊಳ್ಳಿ. ಒಂಟಿತನ ಮತ್ತು ಖಿನ್ನತೆಯ ಭಾವನೆ ಅಳಿಸಿಹಾಕಿ ಅವರಿಗೆ ತಾವು ಅಮೂಲ್ಯವೆಂದು ಭಾವನೆ ಬರುವ ಹಾಗೆ ಮಾಡಿ.

**ಸಿಂಹ:** ನಿಮ್ಮ ಆರೋಗ್ಯವನ್ನು ನಿರ್ಲಕ್ಷ್ಯ ಮಾಡಬೇಡಿ ವಿಶೇಷವಾಗಿ ಮದ್ಯಪಾನ ಮಾಡಬೇಡಿ. ಇಂದು ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯ ಕಾರಣದಿಂದ ತೊಂದರೆಗೊಳಗಾಗಬಹುದು. ಇದಕ್ಕಾಗಿ ನೀವು ನಿಮ್ಮ ಯಾವುದೇ ವಿಶ್ವಾಸಾರ್ಹರಿಂದ ಸಲಹೆಯನ್ನು ತೆಗೆದುಕೊಳ್ಳಬೇಕು. ನಿಮ್ಮ ಕುಟುಂಬದ ಸಲುವಾಗಿ ಉದಾತ್ತ ಮತ್ತು ಉಪಯುಕ್ತವಾದದ್ದರ ಸಲುವಾಗಿ ಶ್ರಮಪಡಿ.

**ಕನ್ಯಾ:** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ ಅಹಂಭಾವ ಮತ್ತು ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ. ಕೆಲವು ಪ್ರಮುಖ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ ಹಾಗೂ ಅವು ನಿಮಗೆ ಹೊಸ ಆರ್ಥಿಕ ಲಾಭ ತರುತ್ತವೆ.

**ತುಲಾ:** ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಇಂದು ಸಾಲಗಾರನು ನಿಮ್ಮ ಮನೆ ಬಾಗಿಲಿಗೆ ಬರಬಹುದು ಮತ್ತು ನಿಮ್ಮ ಹತ್ತಿರ ಸಾಲ ಕೇಳಬಹುದು. ಅವರಿಗೆ ಹಣವನ್ನು ಹಿಂದಿರುಗಿಸಿ ನೀವು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಬಹುದು.

**ವೃಶ್ಚಿಕ:** ನಿಮ್ಮ ಭಾವನೆಗಳನ್ನು ನಿಯಂತ್ರಿಸಲು ನಿಮಗೆ ಕಷ್ಟವಾಗಬಹುದು - ನಿಮ್ಮ ಅಸಾಮಾನ್ಯ ವರ್ತನೆ ನಿಮ್ಮ ಸುತ್ತಲಿನ ಜನರನ್ನು ಗೊಂದಲದಲ್ಲಿ ಕೆಡವಬಹುದು ಮತ್ತು ನಿಮ್ಮನ್ನು ನಿರಾಸೆಗೊಳಿಸಬಹುದು. ವಿವಾಹಿತರು ಇಂದು ತಮ್ಮ ಮಕ್ಕಳ ಅಧ್ಯಯನದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇದು ನೀವು ಪ್ರಣಯಭರಿತ ಪ್ರವಾಸಕ್ಕೆ ಹೋಗುವ ದಿನ.

**ಧನು:** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಆವತ್ತಿಗಾಗಿ ಮಾತ್ರ ಬದುಕುವ ಮತ್ತು ಮನೋರಂಜನೆಗಾಗಿ ಹೆಚ್ಚು ಸಮಯ ಮತ್ತು ಹಣ ಖರ್ಚು ಮಾಡುವ ನಿಮ್ಮ ಪ್ರವೃತ್ತಿಯನ್ನು ನಿಯಂತ್ರಿಸಿ. ನೀವು ಪಾರ್ಟಿ ನೀಡಲು ಯೋಜಿಸುತ್ತಿದ್ದಲ್ಲಿ ನಿಮ್ಮ ಎಲ್ಲಾ ಒಳ್ಳೆಯ ಸ್ನೇಹಿತರನ್ನು ಆಮಂತ್ರಿಸಿ ನಿಮ್ಮನ್ನು ಅಸ್ತುಷ್ಟಗೊಳಿಸುವ ಬಹಳಷ್ಟು ಜನರಿರುತ್ತಾರೆ.

**ಮಕರ:** ನಿಯಮಿತ ತೊಂದರೆ ನಿಮಗೆ ಕೆಲವು ಸಮಸ್ಯೆಗಳನ್ನು ಉಂಟುಮಾಡಬಹುದು. ನಿಮ್ಮ ನರಮಂಡಲದ ಕಾರ್ಯವೆಸಗುತ್ತಿರಲು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಿ. ಮನೆಯ ಅಗತ್ಯಗಳನ್ನು ನೋಡುತ್ತಾ, ಇಂದು ನೀವು ನಿಮ್ಮ ಜೀವನ ಸಂಗಾತಿಯೊಂದಿಗೆ ಯಾವುದೇ ಅಮೂಲ್ಯ ವಸ್ತುವನ್ನು ಖರೀದಿಸಬಹುದು, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು.

**ಕುಂಭ:** ತೊಂದರೆಯಲ್ಲಿರುವ ಯಾರಿಗಾದರೂ ಸಹಾಯ ಮಾಡಲು ನಿಮ್ಮ ಚೈತನ್ಯವನ್ನು ಬಳಸಿ. ಲೋಕೋಪಕಾರಕ್ಕಾಗಲ್ಲದಿದ್ದಲ್ಲಿ ಈ ನಶ್ವರ ದೇಹದ ಉಪಯೋಗವಾದರೂ ಏನು. ಜೀವನ ಸಂಗಾತಿಯೊಂದಿಗೆ ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಜಗಳವಾಗುವ ಸಾಧ್ಯತೆ ಇದೆ. ಇಂದು ನಿಮ್ಮ ದುಂದುಗಾರಿಕೆಯ ಮೇಲೆ ನಿಮ್ಮ ಸಂಗಾತಿ ನಿಮಗೆ ಮಾತುಗಳು ಹೇಳಬಹುದು.

**ಮೀನ:** ನಿಮ್ಮ ದೊಡ್ಡ ಆಸ್ತಿಯೆಂದರೆ ನಿಮ್ಮ ಹಾಸ್ಯಪ್ರಜ್ಞೆಯಾಗಿದೆ ಇದನ್ನು ನಿಮ್ಮ ಅನಾರೋಗ್ಯ ಗುಣಪಡಿಸಲು ಬಳಸಲು ಪ್ರಯತ್ನಿಸಿ. ವಿವಾಹಿತ ಜನರು ಇಂದು ತಮ್ಮ ಮಕ್ಕಳ ಶಿಕ್ಷಣದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಕಲ್ಪನೆಗಳ ಹಿಂದೆ ಓಡಬೇಡಿ ಹಾಗೂ ಸಾಧ್ಯವಾದಷ್ಟೂ ವಾಸ್ತವವಾದಿಗಳಾಗಿರಿ. ನಿಮ್ಮ ಸ್ನೇಹಿತರ ಜೊತೆ ಸಮಯ ಕಳೆಯಿರಿ ಇದು ಒಳ್ಳೆಯದನ್ನು ಮಾಡುತ್ತದೆ.

## ಹೊಸ ವರ್ಷಕ್ಕೆ ಬಹುನಿರೀಕ್ಷಿತ ಚಿತ್ರಗಳ ಹೊಚ್ಚ ಹೊಸ ಪೋಸ್ಟರ್‌ಗಳು

2025 ಕಳೆದ 2026 ವರ್ಷ ಶುರುವಾಗಿದೆ. ಬಹಳ ಅದ್ಧೂರಿಯಾಗಿ ಜನ ಹೊಸ ವರ್ಷವನ್ನು ಬರಮಾಡಿಕೊಂಡಿದ್ದಾರೆ. ಸಿನಿಮಾ ತಾರೆಯರು ವಿಶೇಷವಾಗಿ ಆಪ್ತರ ಜೊತೆ ಹೊಸ ವರ್ಷದ ಪಾರ್ಟಿ ಮಾಡಿ ಎಂಜಾಯ್ ಮಾಡಿದ್ದಾರೆ. ಇನ್ನು ಹೊಸ ವರ್ಷದ ಸಂಭ್ರಮದಲ್ಲಿ ಬಹುನಿರೀಕ್ಷಿತ ಸಿನಿಮಾಗಳ ಹೊಸ ಹೊಸ ಪೋಸ್ಟರ್ ರಿಲೀಸ್ ಆಗಿದೆ.

**1. ಸ್ಪಿರಿಟ್:** ಸಂದೀಪ್ ರೆಡ್ಡಿ ವಂಗಾ ನಿರ್ದೇಶನದಲ್ಲಿ ಪ್ರಭಾಸ್ ನಟನೆಯ ಬಹುನಿರೀಕ್ಷಿತ ಚಿತ್ರ ಸ್ಪಿರಿಟ್. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಈ ಸಿನಿಮಾ ನಿರ್ಮಾಣವಾಗಲಿದೆ. ಅರ್ಜುನ್ ರೆಡ್ಡಿ ಹಾಗೂ ಅನಿಮಲ್ ಸಿನಿಮಾಗಳ ಸಾರಥಿ ವಂಗಾ ಈಗ ಪ್ರಭಾಸ್ ಜೊತೆ ಕೈಜೋಡಿಸಿರುವುದು ಇನ್ನಿಲ್ಲದ ಹೈಪ್ ಕ್ರಿಯೇಟ್ ಮಾಡಿದೆ. ಗಾಯಗೊಂಡು ಬ್ಯಾಂಡೇಜ್ ಸುಟ್ಟಿಕೊಂಡು ಶರ್ಟ್‌ಲೆಸ್ ಆಗಿ ಸಿಗರೇಟ್ ಸೇದುತ್ತಾ ಪ್ರಭಾಸ್ ಕಾಣಿಸಿಕೊಂಡಿರುವ ಪೋಸ್ಟರ್ ರಿಲೀಸ್ ಆಗಿದೆ. ಹೊಸ ವರ್ಷಕ್ಕೆ ಪ್ರಭಾಸ್ ಅಭಿಮಾನಿಗಳು ಭರ್ಜರಿ ಗಿಫ್ಟ್ ಸಿಕ್ಕಂತಾಗಿದೆ.




**2. ಡ್ಯಾಡ್:** ಶಿವರಾಜ್‌ಕುಮಾರ್ ನಟನೆಯ ಡ್ಯಾಡ್ ಚಿತ್ರಕ್ಕೆ ಅನಿಲ್ ಕನ್ನೆಗಂಟಿ ಆಕ್ಷನ್ ಕಟ್ ಹೇಳಿದ್ದಾರೆ. ಚಿತ್ರದಲ್ಲಿ ಶಿವಣ್ಣ ವೈದ್ಯನ ಪಾತ್ರದಲ್ಲಿ ನಟಿಸಿದ್ದು ತಂದೆ-ಮಗಳ ಬಾಂಧವ್ಯದ ಕಥೆ ಚಿತ್ರದಲ್ಲಿದೆ. ಶರ್ಮಿಳಾ ಮಾಂಡ್ರೆ, ಬೇಬಿ ನಕ್ಷತ್ರ ಚಿತ್ರದ ತಾರಾಗಣದಲ್ಲಿದ್ದು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಸಿನಿಮಾ ಬಿಡುಗಡೆ ಆಗಲಿದೆ. ಹೊಸ ವರ್ಷಕ್ಕೆ ಚಿತ್ರದ ಮತ್ತೊಂದು ಪೋಸ್ಟರ್ ಹೊರಬಿದ್ದಿದೆ.

**3. ಭಾರ್ಗವ:** ಉಪೇಂದ್ರ ನಟನೆಯ 45 ಸಿನಿಮಾ ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಹೊಸ ವರ್ಷದ ಸಂಭ್ರಮದಲ್ಲಿ ತಮ್ಮ ಮುಂದಿನ ಸಿನಿಮಾ ಪೋಸ್ಟರ್‌ಗಳನ್ನು ಉಪ್ಪಿ ಹಂಚಿಕೊಂಡಿದ್ದಾರೆ. ನಾಗಣ್ಣ ನಿರ್ದೇಶನದ ಭಾರ್ಗವ ಎಂಬ ಚಿತ್ರದಲ್ಲಿ ಅವರು ನಟಿಸುತ್ತಿದ್ದಾರೆ. ಎಂಬಿ ಬಾಬು ಚಿತ್ರಕ್ಕೆ ಹಣ ಹೂಡಿದ್ದಾರೆ.

**4. ಟಾಕ್ಸಿಕ್:** ಯಶ್ ನಿರ್ಮಿಸಿ ನಟಿಸುತ್ತಿರುವ ಟಾಕ್ಸಿಕ್ ಸಿನಿಮಾ ಭಾರೀ ನಿರೀಕ್ಷೆ ಹುಟ್ಟಾಕ್ಕಿದೆ. ಈ ಚಿತ್ರದ ಮಹಿಳಾ ಪಾತ್ರಗಳನ್ನು ಇತ್ತೀಚೆಗೆ ಫಸ್ಟ್ ಲುಕ್ ಪೋಸ್ಟರ್ ಸಮೇತ ಚಿತ್ರತಂಡ ಪರಿಚಯಿಸಿತ್ತು. ಎರಡು ದಿನಗಳ ಹಿಂದೆಯಷ್ಟೆ ನಯನತಾರ ಪಾತ್ರ ಪರಿಚಯ ಮಾಡಿ ಕೊಡಲಾಗಿತ್ತು. ಗಂಗಾ ಎಂಬ ಪವರ್‌ಫುಲ್ ಪಾತ್ರದಲ್ಲಿ ಆಕೆ ನಟಿಸುತ್ತಿದ್ದಾರೆ.

ಇನ್ನುಳಿದಂತೆ ಸೀತಾ ಪಯಣಂ, ಪಬ್ಬಾರ್ ಸೇರಿದಂತೆ ಸಾಕಷ್ಟು ಚಿತ್ರತಂಡಗಳು ಹೊಸ ಪೋಸ್ಟರ್ ಸಮೇತ ಹೊಸ ವರ್ಷದ ಶುಭಾಶಯ ಕೋರಿದ್ದಾರೆ.

## ಮೊದಲಾರ್ಧದಲ್ಲೇ ಫಾದರ್ ತೆರೆಗೆ



ಆರ್.ಸಿ. ಸ್ಟುಡಿಯೋಸ್‌ನಡಿ ನಿರ್ದೇಶಕ ಆರ್.ಚಂದ್ರು ನಿರ್ಮಾಣ ಮಾಡುತ್ತಿರುವ, ರಾಜ್ ಮೋಹನ್ ನಿರ್ದೇಶನದ ಫಾದರ್ ಸಿನಿಮಾದ ಫಾದರ್ ಥೀಮ್ ವಿಡಿಯೊ ಇತ್ತೀಚೆಗೆ ಬಿಡುಗಡೆಯಾಯಿತು.

ಸಿನಿಮಾವನ್ನು 2026ರ ಮೊದಲಾರ್ಧದಲ್ಲೇ ಬಿಡುಗಡೆ ಮಾಡಲು ಆರ್. ಚಂದ್ರು ನಿರ್ಧರಿಸಿದ್ದಾರೆ. ಡಾರ್ಲಿಂಗ್ ಕೃಷ್ಣ ಈ ಸಿನಿಮಾದ ಮುಖ್ಯಭೂಮಿಕೆಯಲ್ಲಿದ್ದಾರೆ. ಅವರ ನಿರ್ದೇಶನದ ಲವ್ ಮಾಕ್ಟೇಲ್3 ಕೂಡಾ ಬಿಡುಗಡೆಗೆ ಸಿದ್ಧವಿರುವ ಹಿನ್ನೆಲೆಯಲ್ಲಿ ಚರ್ಚಿಸಿ ದಿನಾಂಕ ಘೋಷಣೆ ಮಾಡುವುದಾಗಿ ತಿಳಿಸಿದ್ದಾರೆ ಆರ್.ಚಂದ್ರು. ಸಿನಿಮಾ ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ರಿಲೀಸ್ ಆಗಲಿದೆ.

ಇಂಥ ಕಥೆಯ ಎಳೆ ಕೇಳಸಿಗುವುದೇ ಅಪರೂಪ. ಈ ಸಿನಿಮಾ ಮಾಡಲೇಬೇಕು ಎಂದು ಕಥೆ ಕೇಳಿದಾಗಲೇ ನಿರ್ಧರಿಸಿದ್ದೆ. ತಂದೆಮಗನ ಕಥೆಗಳು ಹಲವು ಬಂದಿವೆ. ಆದರೆ ಈ ಸಿನಿಮಾದಲ್ಲಿ ನಡೆಯುವ ಘಟನೆ ಎಲ್ಲೂ ನೋಡಿರಲು ಸಾಧ್ಯವಿಲ್ಲ. ಕೌಟುಂಬಿಕ, ಸದಭಿರುಚಿಯ ಸಿನಿಮಾ ಮಾಡಬೇಕು ಎನ್ನುವುದು ನನ್ನ ಆಸೆ. ಬಹಳ ವರ್ಷಗಳ ಕಾಲ ಈ ಸಿನಿಮಾ ಮನಸ್ಸಿನಲ್ಲಿ ಉಳಿಯಲಿದೆ ಎನ್ನುತ್ತಾರೆ ಡಾರ್ಲಿಂಗ್ ಕೃಷ್ಣ.

ತಂದೆಮಗನ ಬಾಂಧವ್ಯದ ಕಥೆ ಹೊತ್ತ ಈ ಸಿನಿಮಾದಲ್ಲಿ;ತಂದೆಯ ಪಾತ್ರದಲ್ಲಿ ಪ್ರಕಾಶ್ ರಾಜ್, ಮಗನ ಪಾತ್ರದಲ್ಲಿ ಡಾರ್ಲಿಂಗ್ ಕೃಷ್ಣ ನಟಿಸಿದ್ದಾರೆ. ಅಮೃತಾ ಅಯ್ಯಂಗಾರ್, ಟಗರುಪಲ್ಯ ಖ್ಯಾತಿಯ ನಾಗಭೂಷಣ್ ತಾರಾಬಳಗದಲ್ಲಿದ್ದಾರೆ.

ಮೈಸೂರು, ಧರ್ಮಸ್ಥಳ, ಮಂಗಳೂರು, ಬೆಂಗಳೂರು ಹಾಗೂ ವಾರಾಣಸಿಯಲ್ಲಿ ಚಿತ್ರೀಕರಣಗೊಂಡಿರುವ ಈ ಸಿನಿಮಾಗೆ ಸುಜ್ಞಾನ್ ಛಾಯಾಚಿತ್ರಗ್ರಹಣ, ನಕುಲ್ ಅಭಯಂಕರ್ ಸಂಗೀತ ನಿರ್ದೇಶನವಿದೆ.

> ಈ ಸಿನಿಮಾ ನೋಡುವಾಗ ನಿಮಗೆ ನಿಮ್ಮ ಅಪ್ಪ ನೆನಪಾಗಲಿದ್ದಾರೆ. ನಿಮ್ಮ ಮಕ್ಕಳು ನೋಡುವಾಗ ನಿಮ್ಮ ನೆನಪು ಅವರಿಗಾಗಲಿದೆ. ನನಗೆ 15 ವರ್ಷವಿರುವಾಗ ಅಪ್ಪ ತೀರಿಕೊಂಡರು. ಅಪ್ಪ ಇದ್ದಿದ್ದರೆ ಏನಾಗುತ್ತಿತ್ತು ಎನ್ನುವುದೇ ಕಥೆ. ಇದೊಂದು ನೈಜ ಕಥೆ.
>
> **- ರಾಜ್‌ಮೋಹನ್** ನಿರ್ದೇಶಕ

> ಪ್ರತಿ ಸಿನಿಮಾವೂ ಕಲಿಕೆಯೇ. ನನ್ನ ಕನಸಿಕ ಪೌರಾಣಿಕ ಕಥೆಯೊಂದಿದೆ. ಇದಕ್ಕೆ ಸಾಕಷ್ಟು ಪೂರ್ವಸಿದ್ಧತೆ ಬೇಕಾಗಿದೆ. ಫಾದರ್ ಸಿನಿಮಾದ ಕಥೆ ಎಲ್ಲರಿಗೂ ಬಹಳ ಕನೆಕ್ಟ್ ಆಗಲಿದೆ. ಇದೊಂದು ಕಾಂಟೆಂಟ್ ಚಿತ್ರ. ಸಿನಿಮಾ ಬಿಡುಗಡೆಗೆ ಸಮಯ ಸಂದರ್ಭ ಮುಖ್ಯ. 2026ರ ಮೊದಲಾರ್ಧದಲ್ಲಿ ಬರುವ ಯೋಜನೆ ಹಾಕಿಕೊಂಡಿದ್ದೇವೆ.
>
> **- ಆರ್.ಚಂದ್ರು,** ನಿರ್ಮಾಪಕ

## 2025ರ ಮಿಸ್ಸಿಂಗ್ ಸ್ಟಾರ್ಸ್

ಕನ್ನಡದಲ್ಲಿ ಬಹುತೇಕ ಸ್ಟಾರ್ ಹೀರೋಗಳು ವರ್ಷಕ್ಕೊಂದು ಸಿನಿಮಾ, ಎರಡು ಸಿನಿಮಾ ಎಂದು ಡೈಲಾಗ್ ಹೊಡೆಯುತ್ತಾರಾದರೂ, ಬಹುತೇಕ ಹೀರೋಗಳು ಅದನ್ನು ಜಾರಿಗೆ ತರೋದಿಲ್ಲ. ಕೆಲವು ವರ್ಷಗಳಿಂದ ಬಹುತೇಕ ಸ್ಟಾರ್ ನಟರು ಈ ಪದ್ಧತಿ ಫಾಲೋ ಮಾಡ್ತಿದ್ದಾರೆ. ಮೀಡಿಯಾದವರು ಕೇಳಿದಾಗ ಇನ್ ಮುಂದೆ ಹಾಗೆಲ್ಲ ಆಗಲ್ಲ, ವರ್ಷಕ್ಕೆ ಕನಿಷ್ಠ 2 ಸಿನಿಮಾ ಮಾಡ್ತೀನಿ ಎಂದು ಹೇಳುವುದೂ ಕೂಡಾ ಮಾಮೂಲಿಯಾಗಿ ಬಿಟ್ಟಿದೆ. ಅಂದಹಾಗೆ 2025ರಲ್ಲಿ ಕೆಲವು ಸ್ಟಾರ್ ನಟರು ಮಿಸ್ಸಿಂಗ್ ಸ್ಟಾರ್ಸ್ ಆಗಿದ್ದಾರೆ.

ಧ್ರುವ ಸರ್ಜಾ, ಯಶ್, ಗೋಲ್ಡನ್ ಸ್ಟಾರ್ ಗಣೇಶ್, ಶ್ರೀಮುರಳಿ, ದುನಿಯಾ ವಿಜಯ್, ರಕ್ಷಿತ್ ಶೆಟ್ಟಿ , 2025ರಲ್ಲಿ ಎಂದಿನಂತೆ ಶಿವಣ್ಣ ರಂಜಿಸಿದರು. ರಿಷಬ್ ಶೆಟ್ಟಿ, ಸುದೀಪ್, ರಾಜ್ ಬಿ ಶೆಟ್ಟಿ, ಉಪೇಂದ್ರ, ದರ್ಶನ್.. ಮೊದಲಾದವರ ಸಿನಿಮಾಗಳು ತೆರೆ ಕಂಡವು. ಗೆದ್ದರೂ ಕೂಡಾ. ಮಿಸ್ಸಿಂಗ್ ಸ್ಟಾರ್ಸ್ ಟ್ರೆಂಡ್ ಈ ವರ್ಷವೂ ಕಂಟಿನ್ಯೂ ಆಗಿದ್ದು ವಿಶೇಷ.



## ಬಂದೂಕು, ಬೆಡಗು, ಬೆರಗು; ರಾಕಿ ಅಡ್ಡೆಗೆ ಬಂದ ಲೇಡಿ ಸೂಪರ್ ಸ್ಟಾರ್- ಟಾಕ್ಸಿಕ್‌ನಲ್ಲಿ ಗಂಗಾರತಿ..!



ಹಿಂದೆ ಒಂದು ಕಾಲ ಇತ್ತು. ಆ ಕಾಲದಲ್ಲಿ ಪುರುಷ ಪ್ರಧಾನ ಚಿತ್ರರಂಗದಲ್ಲಿ ನಾಯಕರದ್ದೇ ಕಾರುಬಾರು ಇತ್ತು. ಸಂಭಾವನೆ ವಿಚಾರದಲ್ಲಿಯೂ ನಾಯಕಿಯರಿಗೆ ಆಗ್ತಿದ್ದಿದ್ದು ಅನ್ಯಾಯನೇ. ನಾಯಕರಿಗೆ ಕೊಡಲಾಗುತ್ತಿದ್ದ ಸಂಭಾವನೆಯ ಅರ್ಧದಷ್ಟು ಹಣ ನಾಯಕಿಗೆ ಕೊಡಲು ಹಿಂದೇಟು ಹಾಕ್ತಿದ್ದ ಕಾಲ ಅದು. ಆದರೆ ಈಗ ಕಾಲ ಪರಿಸ್ಥಿತಿ ಬದಲಾಗಿದೆ. ಅಲ್ಲೊಬ್ಬರು .. ಇಲ್ಲೊಬ್ಬರು .. ನಾಯಕರಿಗೆ ಸರಿಸಮಾನವಾಗಿ ಸಂಭಾವನೆ ಪಡೆಯುತ್ತಿದ್ದಾರೆ.

ಇನ್ನೂ ಕೆಲವರು ನಾಯಕರಿಗೆ ಎಣಿಸುವ ದುಡ್ಡಿಗಿಂತ ಹೆಚ್ಚಿನ ದುಡ್ಡನ್ನೂ ಎಣಿಸುತ್ತಿದ್ದಾರೆ. ಆ ಪೈಕಿ ನಯನತಾರಾ ಕೂಡ ಒಬ್ಬರು. ಇಂಥಾ ನಯನತಾರ ಟಾಕ್ಸಿಕ್ ಚಿತ್ರದಲ್ಲಿ ಯಶ್ ಜೊತೆ ಕಾಣಿಸಿಕೊಳ್ಳುತ್ತಿದ್ದಾರೆ ಎನ್ನುವ ಸುದ್ದಿ ಹೊರ ಬಂದಾಗ ರಾಕಿ ಭಕ್ತಗಣ ಹುಚ್ಚೆದ್ದು ಕುಣಿದಿತ್ತು. ಲೇಡಿ ಸೂಪರ್ ಸ್ಟಾರ್ ಅಭಿಮಾನಿ ಬಳಗ ಕೇಕೆ ಹಾಕಿತ್ತು. ಈಗ ಅಭಿಮಾನಿಗಳ ಈ ಸದ್ದು-ಸಂಭ್ರಮ ಇನ್ನೂ ಹೆಚ್ಚಾಗಿದೆ. ಚಿತ್ರದ ಮೇಲಿನ ನಿರೀಕ್ಷೆ ಕೂಡ ಇನ್ನೂ ಹೆಚ್ಚಾಗಿದೆ. ಅದಕ್ಕೆ ಕಾರಣ ನಯನತಾರಾ ಅವರ ಪಾತ್ರ ಪರಿಚಯ.

ಹೌದು, ಎಲ್ಲರಿಗೆ ಗೊತ್ತಿರುವಂತೆ ಕಳೆದ ಕೆಲ ದಿನಗಳಿಂದ ಟಾಕ್ಸಿಕ್ ಅಂಗಳದಲ್ಲಿರುವ ಮುಖಗಳನ್ನು ಪರಿಚಯ ಮಾಡಿಸುವ ಕಾರ್ಯಕ್ರಮವನ್ನು ಯಶ್ ಹಮ್ಮಿಕೊಂಡಿದ್ದಾರೆ. ಈಗಾಗಲೇ ತಮ್ಮ ಚಿತ್ರದ ಎಲಿಜಬೆತ್ (ಹುಮಾ ಖುರೇಶಿ) ಮತ್ತು ನಾಡಿಯಾ (ಕಿಯಾರಾ ಅಡ್ವಾಣಿ) ಅವರನ್ನು ಪರಿಚಯ ಮಾಡಿಸಿದ್ದಾರೆ. ಈಗ ನಯನತಾರಾ ಸರದಿ.

ನಯನತಾರ ಈ ಚಿತ್ರದಲ್ಲಿ ಗಂಗಾ ಪಾತ್ರವನ್ನು ಮಾಡಿದ್ದಾರೆ. ಬಂದೂಕು ಹಿಡಿದು ಕಣ್ಣೆದುರು ಬಂದಿದ್ದಾರೆ. ಈ ಬಂದೂಕಿಗೆ ಗುರಿಯಾಗುವುದು ಯಾರು..? ಎನ್ನುವುದು ಸದ್ಯದ ಪ್ರಶ್ನೆ. ಯಾಕೆಂದರೆ.. ಗಂಗಾ ಇಲ್ಲಿ ರಾಕಿಯ ಸ್ನೇಹಿತೆಯೂ ಆಗಿರಬಹುದು. ಜಾನಿ ದುಷ್ಮನ್ ಕೂಡ ಆಗಿರಬಹುದು. ನಿಜಕ್ಕೂ ಗಂಗಾ ಯಾರು..? ಇನ್ನೇಕು ಕೆಲವೇ ದಿನಗಳಲ್ಲಿ ಈ ಪ್ರಶ್ನೆಗೆ ಉತ್ತರ ಸಿಗಲಿದೆಯಾದರು ಸದ್ಯ ಗಂಗಾ ಬೆಡಗು ಹಲವರನ್ನು ಬೆರಗಾಗಿಸಿದೆ. ಫಸ್ಟ್ ಲುಕ್ ಕಿಕ್ ಕೊಡುತ್ತಿದೆ. ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಇನ್ನು ಬಹುತೇಕರಿಗೆ ಗೊತ್ತಿರುವಂತೆ ಜನವರಿ 8 ನಟ ಯಶ್ ಜನ್ಮದಿನ. ಈ ಹಿನ್ನೆಲೆ ಈಗಿಂದಲೇ ಒಂದೊಂದೇ ಪೋಸ್ಟರ್‌ಗಳನ್ನು ಬಿಡುವ ಮೂಲಕ ಅಭಿಮಾನಿಗಳ ಕಾಯುವಿಕೆ ಹೆಚ್ಚಿಸುತ್ತಲೇ ಚಿತ್ರದ ಪ್ರಚಾರಕ್ಕೆ ಕೂಡ ಚಾಲನೆ ನೀಡಿರುವ ಯಶ್, ತಮ್ಮ ಜನ್ಮದಿನದಂದು ಚಿತ್ರದ ಟೀಸರ್‌ನ ತಮ್ಮ ಸಮಸ್ತ ಅಭಿಮಾನಿ ಮತ್ತು ಚಿತ್ರಪ್ರೇಮಿಗಳ ಮಡಿಲಿಗೆ ಹಾಕುವ ನಿರೀಕ್ಷೆ ಇದೆ.

ಅಂದ್ಹಾಗೇ ಯಶ್ ಈ ಬಾರಿ ಬಾಕ್ಸ್ ಆಫೀಸ್ ದಾಖಲೆಗಳನ್ನು ಬೆನ್ನತ್ತಿದಂತೆ ಕಾಣುತ್ತಿಲ್ಲ. ಬದಲಿಗೆ ಪ್ರೇಕ್ಷಕರ ಮನಸಿನಲ್ಲಿ ಶಾಶ್ವತವಾಗಿ ಅಚ್ಚಳಿಯದೇ ಉಳಿಯುವಂತಹ ಸಿನಿಮಾ ಮಾಡುವ ಪ್ರಯತ್ನವನ್ನು ಮಾಡಿದಂತೆ ಇದೆ. ಈಗಾಗಲೇ ಬಿಡುಗಡೆಯಾಗಿರುವ ನಾಯಕಿಯರ ಮೂರು ಫಸ್ಟ್ ಲುಕ್ ಪೋಸ್ಟರ್‌ಗಳು ಇಂತಹದ್ದೊಂದು ಸೂಚನೆಯನ್ನೇ ನೀಡುತ್ತಿವೆ.

ಇನ್ನುಳಿದಂತೆ ರಾಷ್ಟ್ರ ಪ್ರಶಸ್ತಿ ವಿಜೇತ ಕ್ಯಾಮರಾಮ್ಯಾನ್ ರಾಜೀವ್ ರವಿ ಈ ಚಿತ್ರವನ್ನು ತಮ್ಮ ಕ್ಯಾಮರಾದಲ್ಲಿ ಸೆರೆ ಹಿಡಿದ್ದಾರೆ. ರವಿ ಬಸ್ರೂರ್ ಸಂಗೀತ ನಿರ್ದೇಶನ ಮಾಡಿದ್ದಾರೆ. ಉಜ್ವಲ್ ಕುಲಕರ್ಣಿ ಸಂಕಲನ ಮತ್ತು ಟಿ ಪಿ ಅಬಿದ್ ನಿರ್ಮಾಣ ವಿನ್ಯಾಸ ಚಿತ್ರಕ್ಕಿದ್ದು ಹಾಲಿವುಡ್ ಸಾಹಸ ನಿರ್ದೇಶಕ ಜೆಜೆ ಪೆರ್ರಿ (ಜಾನ್ ವಿಕ್) ಮತ್ತು ಅನ್ಬರಿವ್ ಈ ಚಿತ್ರದ ಸಾಹಸ ಸನ್ನಿವೇಶಗಳನ್ನು ಸಂಯೋಜನೆ ಮಾಡಿದ್ದಾರೆ. ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಏಕಕಾಲಕ್ಕೆ ಈ ಚಿತ್ರದ ಚಿತ್ರೀಕರಣ ನಡೆದಿರುವುದು ವಿಶೇಷ. ಬೇರೆ ಭಾಷೆಗಳಿಗೆ ಡಬ್ ಆಗಿ ಈ ಚಿತ್ರ ತೆರೆಗೆ ಬರಲಿದೆ. ಮಾರ್ಚ್ 19ರಂದು ಬೆಳ್ಳಿಪರದೆಯ ಮೇಲೆ ಟಾಕ್ಸಿಕ್ ಧಗಧಗಿಸಲಿದೆ.

# ಜಗತ್ತಿನ ಜಡವನ್ನು ಜೀವಿಸುವಂತೆ ಮಾಡುವುದು ಶಿಲ್ಪಕಲೆ

• ಪ್ರಜೋದಯ ವರದಿ

**ಹಾಸನ:** ಶಿಲೆಯನ್ನು ಸುಂದರ ಮೂರ್ತಿಯಾಗಿಸಿರುವುದು ವಿಶ್ವಕರ್ಮರು ಜಕಣಾಚಾರಿಯವರು ಆಗಿದ್ದಾರೆ. ಜಗತ್ತಿನ ಮೂಲ ಸೌಂದರ್ಯವನ್ನು ಬ್ರಹ್ಮ ಕೊಟ್ಟರೆ ಆ ಸೌಂದರ್ಯಕ್ಕೆ ಜೀವ ಕೊಡುವುದು ಶಿಲ್ಪಿಗಳು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಲ್. ಮಲ್ಲೇಶಗೌಡ ಅವರು ತಿಳಿಸಿದ್ದಾರೆ.

ಗುರುವಾರ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ವಿಶ್ವಕರ್ಮ ಶ್ರೀ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿನ ಜಡವನ್ನು ಜೀವಿಸುವಂತೆ ಮಾಡುವುದು ಶಿಲ್ಪ ಕಲೆಯಾಗಿದೆ. ಒಂದು ಕಲ್ಲು ವ್ಯಕ್ತತೆ ಅಭಿವ್ಯಕ್ತತೆಯನ್ನು ತಂದು ಕೊಡುತ್ತದೆ ಎಂದರು.

ಜಕಣಾಚಾರಿಯವರು ಚಿತ್ರಿಸಿದ ಶಿಲ್ಪಿಗಳು ಹೇಗೆ ಕಣ್ಣ ಮುಂದೆ ಬರುತ್ತವೆಯೋ ಅದೇ ರೀತಿ ಅವರ ಹಿನ್ನಲೆಯೂ ಸಹ ಕಣ್ಣ ಮುಂದೆ ಬರುವಂತೆ ಇರಬೇಕು, ಯಾವುದೇ ವಿದೇಶಿಯರು ಬಂದರೆ ಪ್ರತಿಯೊಂದು ವ್ಯಕ್ತಿಯ ಬಾಯಿಯಲ್ಲೂ ಬರುವಂತಹ ಮಾತು ಶಿಲೆಯನ್ನು ಕೆತ್ತಿದವರು ಯಾರು ಎಂದು ಏಕೆಂದರೆ ಅಷ್ಟು ಸೊಗಸಾಗಿ ಶಿಲೆಯನ್ನು ಕೆತ್ತನೆ ಮಾಡಿರುವುದರಿಂದಾಗಿದೆ. ಈ ನೆಲದ ಕಂಪನ್ನು ಜಗತ್ತಿನ ಮೂಲೆ ಮೂಲೆಗು ಕಂಪಿಸಿದೆ. ಈ ನಮ್ಮ ಹಿರಿಮೆ ಗಿರಿಮೆ ಮುಂದೆಯೂ ಹಾಗೆಯೇ ಉಳಿಯಬೇಕು ಎಂದು ತಿಳಿಸಿದರು.

ಪರಮಪೂಜ್ಯ ಅನಂತ ಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಮಹಾಸ್ವಾಮೀಜಿ ಅವರು ಮಾತನಾಡಿ, ಜಕಣಾಚಾರಿ ಅವರ ಒಂದು ಕಲ್ಪನೆ, ಮಾದರಿಯನ್ನು ಇಟ್ಟುಕೊಂಡು ಅವರು ಚಿತ್ರವನ್ನು ರಚಿಸಿದ್ದಾರೆ. ಜಗತ್ಪ್ರಸಿದ್ಧಿ ವಿದ್ವಾಂಸರು, ಭಾವನಾತ್ಮಕವಾಗಿ ಕೆತ್ತುವ ಶಿಲ್ಪಿ ಎಂದಿಗೂ ತನ್ನ ಹೆಸರನ್ನು ಹಾಕಿಕೊಳ್ಳುವುದಿಲ್ಲ ಎಂದು ತಿಳಿಸಿದರು.



ಬೇಲೂರು ಹಳೇಬೀಡು ದೊಡ್ಡಗದ್ದವಳ್ಳಿ ಎಲ್ಲವೂ ಶಿಲ್ಪ ಕಲೆಗಳ ತವರೂ ಎಂದೇ ಪ್ರಸಿದ್ದಿ ಪಡೆದಿದೆ. ಸಾಧನೆ ಮಾಡುವವರು ಜಿಲ್ಲೆಯಲ್ಲಿ ಇದ್ದಾರೆ. ಸಂಘಟನೆ ಎಂಬುದು ತುಂಬಾ ಮುಖ್ಯ ನಮ್ಮ ಶಿಲ್ಪಕಲೆಗಳು ಎಲ್ಲಿಂದ ಎಲ್ಲಿಯವರೆಗೂ ಹೋದರು ಅವು ಅಜರಾಮರ. ಕನ್ಯಾಕುಮಾರಿಯಿಂದ ಕಾವೇರಿಯವರಿಗೆ ರಚಿಸಿರುವ ಕಲೆಗಳು ನಮ್ಮ ಶಿಲ್ಪಕಲೆಗಳೇ ಆಗಿವೆ. ಬೌದ್ಧರಿಗೆ ಬೇಕಾದ ವಿಹಾರಗಳನ್ನು ರಚಿಸಿದ್ದಾರೆ.ಕ್ರೈಸ್ತರಿಗೆಬೇಕಾದ ಚರ್ಚನ್ನು ಕಟ್ಟಿದವರು ವಿಶ್ವಕರ್ಮ ಶಿಲ್ಪಿಗಳೆ ಆಗಿದ್ದಾರೆ ಎಂದರು.

ಉತ್ತರ ಭಾರತದಿಂದ ಆಗ್ರದವರೆಗೆ ಪ್ರತಿಯೊಂದು ಪ್ರಸಿದ್ದ ಸ್ಥಳಗಳಲ್ಲಿಯೂ ವಿಶ್ವಕರ್ಮಿಗಳ ಹೆಸರು ಇದೆ. ಒಬ್ಬನೇ ದೇವ ಅದು ವಿಶ್ವಕರ್ಮದೇವ ಎಂದು ವಿಶ್ವಕರ್ಮದಿಂದಲೇ ಹೇಳಲಾಗಿದೆ. ವಿಶ್ವಕರ್ಮ ಶ್ರೀ ಅಮರಶಿಲ್ಪಿ ಜಕಣಾಚಾರ್ಯ ಸ್ಮಾರಕ ನಿರ್ಮಾಣ ಮಾಡಿ ಎಂದು ಜಕಣಾಚಾರಿ ಅವರ ಬಾಲ್ಯ ಮತ್ತು ಅವರ ಕೆತ್ತನೆ ಕುರಿತು ತಿಳಿಸಿದರು.

ಆಕಾಶವಾಣಿಯ ನಿವೃತ್ತ ಕಾರ್ಯಕ್ರಮಾಧಿಕಾರಿ ವಿಜಯ ಅಂಗಡಿ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಜಕಣಾಚಾರಿ ಅವರು ಮುಂದಿನ ಪೀಳಿಗೆಯೂ ನೆನಪಿನಲ್ಲಿ ಇಟ್ಟುಕೊಳ್ಳುವಂತ ಕೊಡುಗೆ ನೀಡಿದ್ದಾರೆ. ಅವರ ನೆನಪು ಎಂದೆಂದಿಗೂ ಅಜರಾಮರವಾಗಿದೆಂದು ತಿಳಿಸಿದರು.

ಜಕಣಾಚಾರಿ ಅವರ ಎಲ್ಲಾ ಆಧಾರಗಳು ನಮಗೆ 12ನೇ ಶತಮಾನದ ದಾಖಲೆಗಳಲ್ಲಿ ಸಿಗುತ್ತವೆ. ವಿಶ್ವಕರ್ಮದ ಬಂಧುಗಳು ಎಲ್ಲಾ ದಾಖಲೆಗಳನ್ನು ಇಟ್ಟುಕೊಳ್ಳಿ ಮುಂದೆ ಅಧ್ಯಯನಕ್ಕೆ ಬೇಕಾಗುತ್ತದೆ ಎಂದರಲ್ಲದೆ, ಜಕಣಾಚಾರಿಯವರ ವೃತ್ತಿ ಬಗ್ಗೆ ತಿಳಿಯಬೇಕೆಂದರೆ ತುಮಕೂರು ಜಿಲ್ಲೆಯಲ್ಲಿನ ಜಕ್ಕನಹಳ್ಳಿ ಎಂಬ ಊರಿಗೆ ಭೇಟಿ ನೀಡಿ, ಅಲ್ಲಿ ಅವರ ಕೆಲಸ ಯಾವ ರೀತಿಯಲ್ಲಿದೆ ಎಂಬುದು ತಿಳಿಯುತ್ತದೆ ಎಂದರು.

ಜಕಣಾಚಾರಿಯವರ ನೆನಪು ಸದಾ ಕಾಲ ಇರುವಂತೆ ಮಾಡಿ ಎಂದು ಅವರ ಜೀವನದ ಕುರಿತಾಗಿ ಸವಿವರವಾಗಿ ಉಪನ್ಯಾಸ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಹೆಚ್.ಪಿ ತಾರಾನಾಥ್ ಉಪಸ್ಥಿತರಿದ್ದರು.

## ಸಂವಿಧಾನ ಕಲ್ಪಿಸಿದ ಹಕ್ಕು ಪಡೆಯಲು ಹೋರಾಟ ಅವಶ್ಯ

» ಮೊದಲನೇ ಪುಟದಿಂದ

ಬದಲಾಗಬೇಕಿದೆ. ಇತಿಹಾಸ ಅರಿಯದಿದ್ದರೆ ನ್ಯಾಯ ಪಡೆಯಲು ಸಾಧ್ಯವಿಲ್ಲ. ಅವಮಾನವನ್ನು ಸಹಿಸದ ವ್ಯಕ್ತಿಗಳು ಮಾತ್ರ ಗೆಲ್ಲಲು ಸಾಧ್ಯ. ಅದನ್ನು ನಮಗೆ ಕಲಿಸಿದವರು ಕೋರೇಗಾಂವ್ ಕಲಿಗಳೆಂದರು.

ವಕೀಲ ಸುಧೀರ್ ಕುಮಾರ್ ಮುರುಡಿ ಅವರು ಮಾತನಾಡಿ, ಕೋರೇಗಾಂವ್ ವಿಜಯೋತ್ಸವ ನಂತರ ದಲಿತರಿಗೆ ತಮ್ಮ ತೋಳ್ಬಲದ ಅರಿವು ಮೂಡಿದೆ. ನಮ್ಮೊಂದಿಗೆ ಇದ್ದು ನಮ್ಮ ವಿರುದ್ಧ ಕೆಲಸ ಮಾಡುವವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಶೋಷಿತರ ವಿರೋಧಿಗಳಿಗೆ ಮತ ನೀಡಬಾರದು. ನಮ್ಮ ಮತ ವ್ಯರ್ಥವಾಗಬಾರದು. ಶೋಷಿತರ ಮೊದಲ ಗೆಲುವೇ ಕೋರೇಗಾಂವ್ ಯುದ್ಧ. ಅದನ್ನು ಇತಿಹಾಸದಲ್ಲಿ ದಾಖಲಿಸದೇ ಇರುವುದು ಶೋಷಿತ ಸಮಾಜಕ್ಕೆ ಮಾಡಿದ ದ್ರೋಹ. ಸಂವಿಧಾನ ಬದಲಾಯಿಸುವ ಬಗ್ಗೆ ಮಾತನಾಡುವವರ ವಿರುದ್ಧ ಎಚ್ಚರವಾಗಿರಬೇಕು. ಸಾರ್ವಜನಿಕರಲ್ಲಿ ಹೋರಾಟದ ಅರಿವು ಮೂಡಿಸಲು ಕೋರೇಗಾಂವ್ ವಿಜಯೋತ್ಸವ ಆಚರಿಸಲಾಗುತ್ತದೆಂದರು.

ಮಿನಿವಿಧಾನ ಸೌಧ ಸಮೀಪದ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಪಟ್ಟಣದ ಮುಖ್ಯ ಬೀದಿಯಲ್ಲಿ ಕಲಾ ತಂಡಗಳೊಂದಿಗೆ ಅಂಬೇಡ್ಕರ್ ಭಾವಚಿತ್ರ ಹಾಗು ಕೋರೇಗಾಂವ್ ವಿಜಯ ಸ್ತಂಭದೊಂದಿಗೆ ಮೆರವಣಿಗೆ ನಡೆಸಲಾಯಿತು.

ಭಂತೇಜಿ ಸುಗತಪಾಲ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬೈರಮುಡಿ ಚಂದ್ರು, ಕಾಂಗ್ರೆಸ್ ಮುಖಂಡ ಮುರುಳಿ ಮೋಹನ್, ಸಮಿತಿ ಅಧ್ಯಕ್ಷ ಲಕ್ಷ್ಮಣ ಕೀರ್ತಿ, ಗೌರವಾಧ್ಯಕ್ಷ ನಲ್ಲುಳ್ಳಿ ಈರಪ್ಪ, ಹೆತ್ತೂರು ಅಣ್ಣಯ್ಯ, ಸಕಲೇಶಪುರ ಪ್ರಾಧಿಕಾರದ ಅಧ್ಯಕ್ಷ ಸೈಯದ್ ಮುಫೀಜ್ ಕೊಮಾರಯ್ಯ, ಭೀಮ್ ಆರ್ಮಿ ಜಗದೀಶ್, ಯಡೇಹಳ್ಳಿ ಆರ್.ಮಂಜುನಾಥ್, ಕಟ್ಟೆಗದ್ದೆ ನಾಗರಾಜ್,ಪ್ರಶಾಂತ್ ಕಲ್ಗಣೆ ಇದ್ದರು.

# ಡಾ|| ಗುರುರಾಜ ಹೆಬ್ಬಾರ್ ಎಂದೆಂದಿಗೂ ಜೀವಂತ

» ಮೊದಲನೇ ಪುಟದಿಂದ

ರಾಗಿದ್ದರು. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪದವಿ ಪಡೆದ ಅವರಿಗೆ ಹಣ ಮಾಡಲು ಸಾಕಷ್ಟು ಆಯ್ಕೆಗಳಿದ್ದವು. ಜನಸೇವೆಯೇ, ಜನಾರ್ಧನ ಸೇವೆ ಎಂದು ನಂಬಿದ್ದ ಅವರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಆರಂಭಿಸಿದರು. ಅಲ್ಲಿಯೂ ತೃಪ್ತರಾಗದೆ ಉದ್ಯೋಗಕ್ಕೆ ರಾಜೀನಾಮೆ ನೀಡಿ ಖಾಸಗಿ ಆಸ್ಪತ್ರೆ ತೆರೆದು ಬಡವರಿಗೆ ನೆರವಾಗಿದ್ದಾರೆಂದರು.

ಬಡವರ ಬಳಿ ಚಿಕಿತ್ಸೆಗೆ ಹಣ ಪಡೆಯದೆ ಅವರೇ ದುಡ್ಡು ಕೊಟ್ಟು ಕಳುಹಿಸಿದ ಸಾಕಷ್ಟು ನಿದರ್ಶನಗಳಿವೆ. ಕೋವಿಡ್ ಸಮಯದಲ್ಲಿ ಸೇವೆ ನೀಡಲು ಬಹುತೇಕ ವೈದ್ಯರು ಹೆದರಿದರು. ಹೆಬ್ಬಾರ್ ಅವರು ಪ್ರಾಣದ ಹಂಗು ತೊರೆದು ಕೆಲಸ ಮಾಡಿದ್ದಾರೆ.



ವೈದ್ಯನಾಗಿ ದೇಹಕ್ಕೆ ಚಿಕಿತ್ಸೆ ನೀಡಿದರೆ ಸಾಕಾಗುವುದಿಲ್ಲವೆಂದು ಸಮಾಜದ ವ್ಯಾದಿಗಳಿಗೂ ಚಿಕಿತ್ಸೆ ಕೊಡಬೇಕೆಂದು ಸೇವೆಯಲ್ಲಿ ತೊಡಗಿದರು. ಜನ ಕಲ್ಯಾಣ ರಿಸರ್ಚ್ ಅಂಡ್ ಚಾರಿಟೆಬಲ್ ಟ್ರಸ್ಟ್, ಸಂಜೀವಿನಿ ಸಹಕಾರಿ ಆಸ್ಪತ್ರೆ, ಜನ ಕಲ್ಯಾಣ ಸಿಟಿ ಸ್ಕ್ಯಾನಿಂಗ್ ಸೆಂಟರ್, ಕಾಮಧೇನು ಸಹಕಾರಿ ವೃದ್ಧಾಶ್ರಮ, ಹಿಮ್ಸ್ ಆವರಣದಲ್ಲಿ ಧರ್ಮ ಛತ್ರ, ಗೋ ಶಾಲೆ ಆರಂಭದ ಮೂಲಕ ಅವರು ಸಮಾಜಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆಂದರು.

ಡಾ||ಗುರುರಾಜ ಹೆಬ್ಬಾರ್ ಅವರು ಕೊನೆತನಕ ಹಣವಂತರಾಗಲಿಲ್ಲ. ಆದ್ದರಿಂದಲೇ ಅವರು ಮಾಡುವ ಒಳ್ಳೆಯ ಕಾರ್ಯಗಳಿಗೆ ದಾನಿಗಳು ಹೆಚ್ಚಾದರು. ಯಾವ ಪ್ರಶಸ್ತಿಗೂ ಅವರು ಅರ್ಜಿ ಸಲ್ಲಿಸಲಿಲ್ಲ. ಕನ್ನಡ ರಾಜ್ಯೋತ್ಸವ ಸೇರಿ ಅನೇಕ ಪುರಸ್ಕಾರಗಳು ಅವರನ್ನು ಅರಸಿ ಬಂದವು ಎಂದರು. ಜನಪ್ರಿಯ ಆಸ್ಪತ್ರೆ ವತಿಯಿಂದ ಆರೋಗ್ಯ ತಪಾಸಣೆ ಹಾಗು ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ಅನೇಕರು ದೇಹದಾನ-ನೇತ್ರದಾನಕ್ಕೆ ನೋಂದಣಿ ಮಾಡಿದರು.


ಕಾಮಧೇನು ಸಹಕಾರಿ ವೃದ್ಧಾಶ್ರಮ ಅಧ್ಯಕ್ಷ ಎಂ.ಮಾಧವ ಶೈಣೈ, ಮುತ್ತತ್ತಿ ರಾಜಣ್ಣ, ಶಾಸಕ ಹೆಚ್.ಪಿ.ಸ್ವರೂಪ್ ಅವರ ತಾಯಿ ಲಲಿತಾ, ಸಾದ್ಯ ಟ್ರಸ್ಟ್‌ನ ಉಮೇಶ್, ಕೆ.ಎಸ್.ಚಂದನ್, ರೆಡ್ ಕ್ರಾಸ್ ಜಿಲ್ಲಾ ಸಭಾಪತಿ ಹೆಚ್.ಪಿ. ಮೋಹನ್, ಪರಿಪೂರ್ಣ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಹೆಚ್.ವಿ. ಲಕ್ಷ್ಮೀನಾರಾಯಣ, ಡಾ|| ಗುರುರಾಜ ಹೆಬ್ಬಾರ್ ಮೆಮೋರಿಯಲ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಡಾ|| ಜಿ. ಪ್ರತಿಭಾ, ಪ್ರಶಾಂತಿ ಸೇವಾ ಟ್ರಸ್ಟ್‌ನ ಕಾಳೇಗೌಡ ಇತರರಿದ್ದರು.

# ಬೇಲೂರಿನಲ್ಲಿ ಜಕಣಾಚಾರಿ ಪುತ್ಥಳಿ ನಿರ್ಮಾಣಕ್ಕೆ ಒತ್ತಾಯ

• ಪ್ರಜೋದಯ ವರದಿ

**ಬೇಲೂರು:** ಶಿಲ್ಪಕಲೆಗಳಿಗೆ ಜೀವ ತುಂಬಿ ವಿಶ್ವದ ಕಲಾರಸಿಕರನ್ನು ಸೆಳೆದ ಅಮರಶಿಲ್ಪಿ ಜಕ ಣಾಚಾರಿ ಪುತ್ಥಳಿಯನ್ನು ಬೇಲೂರಿನಲ್ಲಿ ಸ್ಥಾಪಿಸಬೇಕೆಂದು ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಪುರುಷೋತ್ತಮ ಅವರು ಒತ್ತಾಯಿಸಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಅಮರಶಿಲ್ಪಿ ಜಕಣಾಚಾರಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೇಲೂರಿನ ಐತಿಹಾಸಿಕ ಚನ್ನಕೇಶವ ಸ್ವಾಮಿ ದೇವಾಲಯದ ಭವ್ಯ ಶಿಲ್ಪಕಲೆ ಹಾಗು ದೇವರ ಮೂರ್ತಿ ನಿರ್ಮಾಣಕ್ಕೆ ಜಕಣಾಚಾರಿ ಅವರೇ ಕಾರಣರಾಗಿದ್ದಾರೆ. ಅವರ ಶಿಲ್ಪಕೌಶಲ್ಯ ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದು ಹೇಳಿದರು.



ವಿಶ್ವಕರ್ಮ ಸಮಾಜವು ಶತಮಾನಗಳಿಂದ ದೇಶದ ಆರ್ಥಿಕ, ಸಾಂಸ್ಕೃತಿಕ ಹಾಗು ಸಾಮಾಜಿಕ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಿಕೊಂಡಿದೆ. ದೇವಾಲಯಗಳ ಶಿಲ್ಪಕಲೆ, ವಾಸ್ತುಶಿಲ್ಪ, ಲೋಹ, ಮರ, ಕಲ್ಲು ಹಾಗು ಕೈಗಾರಿಕಾ ಕ್ಷೇತ್ರಗಳಲ್ಲಿ ವಿಶ್ವಕರ್ಮರ ಕೊಡುಗೆ ಅಪ್ರತಿಮವಾಗಿದೆ. ಇಂತಹ ಶ್ರೀಮಂತ ಪರಂಪರೆಯನ್ನು ಇಂದಿನ ಪೀಳಿಗೆಯ ಯುವಕರು ಅರಿತುಕೊಂಡುಮುಂದುವರಿಸಬೇಕಾಗಿದೆ ಎಂದರು.

ಸರ್ಕಾರದಿಂದ ವಿಶ್ವಕರ್ಮ ಸಮಾಜಕ್ಕೆ ದೊರೆಯುತ್ತಿರುವ ವಿವಿಧ ಸೌಲಭ್ಯಗಳು, ಯೋಜನೆಗಳು ಹಾಗು ಶೈಕ್ಷಣಿಕ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಂಡು ಯುವಕರು ಶಿಕ್ಷಣ, ಸ್ವಉದ್ಯೋಗ, ಉದ್ಯೋಗ ಕ್ಷೇತ್ರಗಳಲ್ಲಿ ಮುಂದೆ ಬರಬೇಕೆಂದರು.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಮಾತನಾಡಿ, ವಿಶ್ವಕರ್ಮರ ಶ್ರಮ, ಸೃಜನಶೀಲತೆ ಹಾಗು ನೈಪುಣ್ಯದ ಜೀವಂತ ಪ್ರತೀಕವಾಗಿದ್ದಾರೆ. ಸಮಾಜದ ಅಭಿವೃದ್ಧಿಯಲ್ಲಿ ಕಾರ್ಮಿಕರು, ಶಿಲ್ಪಿಗಳು ಹಾಗು ಕೈಗಾರಿಕಾರರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ವಿಶ್ವಕರ್ಮರ ಕೊಡುಗೆ ಎಂದಿಗೂ ಮರೆತಿರಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಗಣ್ಯರನ್ನು ಅಭಿನಂದಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ, ಬಿಆರ್‌ಸಿ ಶಿವಮರಿಯಪ್ಪ, ಹರೀಶ್, ಸಮಾಜದ ಉಮೇಶ್ ಆಚಾರ್ ನಾಗೇಶ್ ಆಚಾರ್, ಹಿತೇಶ್, ಅರುಣಾಚಲಂ, ವಿಶ್ವನಾಥ್ ಹಾಜರಿದ್ದರು.



## ಸಾಂಪ್ರದಾಯಿಕ ಉಡುಗೆಯಲ್ಲಿ ಅಧಿಕಾರಿಗಳು

**ಹಾಸನ:** ಹೊಸವರ್ಷದ ಹಿನ್ನಲೆ ಜಿಲ್ಲಾಧಿಕಾರಿ ಕಚೇರಿಯ ಅಧಿಕಾರಿಗಳು ಸಾಂಪ್ರದಾಯಿಕ ಉಡುಗೆ ತೊಟ್ಟು ಕಚೇರಿಗೆ ಆಗಮಿಸಿ ಗಮನ ಸೆಳೆದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸೇರಿ ಎಲ್ಲಾ ಮಹಿಳಾ ಅಧಿಕಾರಿಗಳು ಸಿಬ್ಬಂದಿ ಕಡು ನೇರಳೆ ಬಣ್ಣದ ಸೀರೆಯುಟ್ಟರೆ, ಪುರುಷ ಅಧಿಕಾರಿಗಳು, ಸಿಬ್ಬಂದಿ ಬಿಳಿ ಶರ್ಟ್ ಮತ್ತು ಪಂಚೆ ಧರಿಸಿ ಕಚೇರಿಗೆ ಆಗಮಿಸಿ ಪರಸ್ಪರ ಹೊಸವರ್ಷದ ಶುಭಾಶಯ ಕೋರಿಕೊಂಡು ಜಿಲ್ಲಾಧಿಕಾರಿ ಯೊಂದಿಗೆ ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

# ಕೋರೆಗಾಂವ್ ವಿಜಯೋತ್ಸವ ದಲಿತರ ಸ್ವಾಭಿಮಾನದ ಸಂಕೇತ

• ಪ್ರಜೋದಯ ವರದಿ

**ಅರಕಲಗೂಡು:** ಕೋರೆಗಾಂವ್ ವಿಜಯೋತ್ಸವ ದಲಿತರ ಸ್ವಾಭಿಮಾನದ ಸಂಕೇತವಾಗಿದೆ ಎಂದು ಬೆಂಗಳೂರಿನ ಭಾರತೀಯ ಬೌದ್ಧ ಮಹಾಸಭಾ ಅಧ್ಯಕ್ಷ ನಿವೃತ್ತ ಡಿಸಿಪಿ ಎಸ್.ಸಿದ್ದರಾಜು ಅವರು ಅಭಿಪ್ರಾಯಪಟ್ಟರು.

ಭೀಮಾ ಕೋರೆಗಾಂವ್ ವಿಜಯೋತ್ಸವ ಸಮಿತಿ ಹಾಗೂ ಭೀಮ ಬಾಯ್ಸ್ ಸಂಘಟನೆ ಸಹಯೋಗದಲ್ಲಿ ಏರ್ಪಡಿಸಿದ್ದ 208ನೇ ಭೀಮ ಕೋರೆಗಾಂವ್ ವಿಜಯೋತ್ಸವದಲ್ಲಿ ಮಾತನಾಡಿದ ಅವರು, ಇತಿಹಾಸದಲ್ಲಿ ಹುದುಗಿ ಹೋಗಿದ್ದ ಮೆಹರ್ ಸೈನಿಕರ ಸಾಹಸ ಗಾಥೆಯನ್ನು ಬೆಳಕಿಗೆ ತರುವ ಮೂಲಕ ಅಂಬೇಡ್ಕರ್ ಇತಿಹಾಸವನ್ನು ಮರುಸೃಷ್ಠಿ ಮಾಡಿದ್ದಾರೆ. ಇಂದು ಲಕ್ಷಾಂತರ ಜನ ಭೀಮಾ ಕೋರೆಗಾಂವ್ ಪ್ರದೇಶಕ್ಕೆ ಭೇಟಿ ನೀಡುವ ಮೂಲಕ ಅದರ



ಪ್ರತೀಕ ಮತ್ತು ಮಹತ್ವದ ಕುರಿತು ಅರಿವು ಮೂಡಿಸಿಕೊಂಡಿದ್ದಾರೆ. ಅದನ್ನು ಒತ್ತುವರಿ ಮಾಡಿದ್ದವರ ವಿರುದ್ದ ಸರ್ಕಾರ ಕ್ರಮಕೈಗೊಂಡಿದ್ದು ಇದೊಂದು ತೀರ್ಥಕ್ಷೇತ್ರವಾಗಿ ಪರಿವರ್ತನೆಗೊಂಡಿದೆ. ಸಂವಿಧಾನ ಎಲ್ಲರಿಗೂ ಸಮಾನತೆ ನೀಡಿದ್ದರೂ ಸಮಾಜದಲ್ಲಿ ಜಾತಿಯತೆ ಬೂದಿಮುಚ್ಚಿದ ಕೆಂಡದಂತೆ ಇದ್ದು ಅದು ತನ್ನ ಕರಾಳ ರೂಪವನ್ನು ಆಗಾಗ್ಗೆ ಪ್ರಕಟ ಪಡಿಸುತ್ತಿರುತ್ತದೆ. ಇಂತಹ ಮೌಢ್ಯಗಳ ವಿರುದ್ದ ಜಾಗೃತಿ ಮೂಡಿಸ ಬೇಕಿದೆ ಎಂದರು.

ವಾಣಿಜ್ಯ ಇಲಾಖೆ ಸಹಾಯಕ ಆಯುಕ್ತ ಎಂ.ಬಿ.ಚನ್ನಕೇಶವ ಅವರು ಮಾತನಾಡಿ, ಅಂಬೇಡ್ಕರ್ ವಿಶ್ವದ ಜ್ಞಾನದ ಸಂಕೇತವಾಗಿದ್ದರು. ಕತ್ತಲಲ್ಲಿದ್ದ ಸಮುದಾಯದವರನ್ನು ಬಡಿದೆಬ್ಬಿಸಿ ಜ್ಞಾನದ ಬೆಳಕು ನೀಡಿದ ಮಹಾನ್ ಚೇತನ, ಅವರ ತತ್ವ, ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಜೊತೆಗೆ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಬದುಕು ಕಟ್ಟಿಕೊಳ್ಳಲು ನೆರವಾಗಬೇಕು ಎಂದರು.

ವಕೀಲ ಶಂಕರಯ್ಯ, ಶಿಕ್ಷಕ ನಂದಕುಮಾರ್ ಮಾತನಾಡಿದರು. ಕಾರ್ಯಕ್ರಮಕ್ಕೆ ಮುನ್ನ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಿದ್ದನಾಕ್ ಅವರ ಭಾವ ಚಿತ್ರದ ಮೆರವಣಿಗೆ ನಡೆಸಲಾಯಿತು. ಅಂಬೇಡ್ಕರ್ ಹಾಗೂ ಅನಕ್ಯ ಪುತ್ಥಳಿಗಳಿಗೆ ಮಾಲಾರ್ಪಣೆಮಾಡಿ ಗೌರವ ಸೂಚಿಸಲಾಯಿತು.

ಜೈಭೀಮ್ ನಗರದ ಮುಖ್ಯ ರಸ್ತೆ ಬಳಿ ನಿರ್ಮಿಸಿರುವ ಕೋರೆಗಾಂವ್ ವಿಜಯೋತ್ಸವ ಸ್ಥಂಭಕ್ಕೆ ಪುಷ್ಪನಮನ ಸಲ್ಲಿಸಿ ವೀರ ಮೆಹರ್ ಸೈನಿಕರ ಶೌರ್ಯವನ್ನು ಸ್ಮರಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕೋರೆಗಾಂವ್ ವಿಜಯೋತ್ಸವ ಸಮಿತಿ ಅಧ್ಯಕ್ಷ ಎ.ಬಿ.ಚಂದ್ರ, ಮನೋಜ್, ಕಾರ್ತಿಕ್, ಸುಮಂತ್, ಹೇಮಂತ್, ಶಂಕರಪ್ಪ, ರಾಜಶೇಖರ್, ಕೀರ್ತಿ ಉಪಸ್ಥಿತರಿದ್ದರು.

## ಗಂಜಿಗೆರೆ ಏತ ನೀರಾವರಿಗೆ ಜನಪ್ರತಿನಿಧಿ ನಿರ್ಲಕ್ಷ್ಯ



» ಮೊದಲನೇ ಪುಟದಿಂದ

ಮಂದಿರ, ಗರಿಘಟ್ಟ ಹಳ್ಳಿಗಳ ಸುಮಾರು 900 ಎಕರೆ ಕೃಷಿ ಪ್ರದೇಶಕ್ಕೆ ಅನುಕೂಲವಾಗಲಿದೆ. ಸುತ್ತ ನೀರಾವರಿ ಪ್ರದೇಶದಿಂದ ಕೂಡಿದ್ದು, ಸಮುದ್ರಕ್ಕೆ ಉಪ್ಪಿನ ಬರ ಎಂಬಂತಾಗಿದೆ. ಈ ಯೋಜನೆಯಿಂದ ನೀರು ಎತ್ತುವ ಮೋಟಾರ್‌ಗಳು ಚಾಲನೆಗೊಳ್ಳದೆ ತಾಂತ್ರಿಕ ದೋಷ ದಿಂದ ಕೂಡಿವೆ. ಅಧಿಕಾರಿಗಳು ಹಣದ ಕೊರತೆಯ ನೆಪ ಹೇಳದೆ ಶೀಘ್ರವಾಗಿ ಮೋಟರ್ ರಿಪೇರಿ ಮಾಡಿ ನೀರು ಹರಿಸಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದೇನೆ ಎಂದರು.

ಹೇಮಾವತಿ ಮುಳುಗಡೆ ಸಂತ್ರಸ್ತರ ಪುನರ್ವಸತಿ ಇಲಾಖೆಯ ಸಹಾಯಕ ಕಾರ್ಯ ಪಾಲಕ ಇಂಜಿನೀಯರ್ ಸಜಿತ್, ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಬ್ರಹ್ಮಣ್ಯ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರುದ್ರೇಗೌಡ ಉಪಸ್ಥಿತರಿದ್ದರು.

## ವಿಜಯ್ ಹಜಾರೆ ಟೂರ್ನಿ: ಸರ್ಫರಾಜ್ ಶತಕ

• ಪ್ರಜೋದಯ ವರದಿ

**ಜೈಪುರ:** ಅಮೋಘ ಲಯದಲ್ಲಿರುವ ಸರ್ಫರಾಜ್ ಖಾನ್ ವರ್ಷದ ಕೊನೆಯ ದಿನ 75 ಎಸೆತಗಳಲ್ಲಿ 14 ಸಿಕ್ಸರ್‌ಗಳು ಒಳಗೊಂಡಿದ್ದ 157 ರನ್ ಸಿಡಿಸಿದರು. ಅವರ ಅಬ್ಬರದ ಆಟದ ನೆರವಿನಿಂದ ಮುಂಬೈ ತಂಡ ಸಿ ಗುಂಪಿನ ವಿಜಯ್ ಹಜಾರೆ ಟೂರ್ನಿ ಪಂದ್ಯದಲ್ಲಿ ಬುಧವಾರ ಗೋವಾ ತಂಡವನ್ನು 87 ರನ್‌ಗಳಿಂದ ಮಣಿಸಿ ನಾಕೌಟ್ ಅವಕಾಶ ಉಜ್ವಲಗೊಳಿಸಿತು.

ಸೈಯ್ಯದ್ ಮುಷ್ತಾಕ್ ಅಲಿ ಟಿ-20 ಟೂರ್ನಿಯಲ್ಲೂ ರನ್ ಹೊಳೆ ಹರಿಸಿದ್ದ ಸರ್ಫರಾಜ್ 56 ಎಸೆತಗಳಲ್ಲಿ ಶತಕ ದಾಟಿದರು. ಮುಂಬೈ 8 ವಿಕೆಟ್‌ಗೆ 444 ರನ್ ಪೇರಿಸಿತು. ಸರ್ಫರಾಜ್ ಅವರ ತಮ್ಮ ಮುಶೀರ್ 60 ರನ್ ಗಳಿಸಿದರೆ, ಹಾರ್ದಿಕ್ ತಮೋರೆ 53 ರನ್, ಯಶಸ್ವಿ ಜೈಸ್ವಾಲ್ 46 ರನ್ ಬಾರಿಸಿದರು.

ಈ ಭಾರಿ ಸವಾಲಿನೆದುರು ಗೋವಾ ಸುಲಭವಾಗಿ ಶರಣಾಗಲಿಲ್ಲ. 9 ವಿಕೆಟ್‌ಗೆ 357



ರನ್ ಗಳಿಸಿ ಹೋರಾಟ ತೋರಿತು. ಅಭಿನವ್ ತೇಜರಾಣಾ ಬರೋಬ್ಬರಿ 100 ರನ್ (70ಎ, 45, 68) ಬಾರಿಸಿದರು. ನಾಯಕ ದೀಪರಾಜ್ ಗಾಂವಕರ್ ಬರೇ 28 ಎಸೆತಗಳಲ್ಲಿ 70 ರನ್ (44, 67) ಚಚ್ಚಿದರು. ಶಾರ್ದೂಲ್ ಠಾಕೂರ್ 20 ರನ್ ನೀಡಿ 3 ವಿಕೆಟ್ ಪಡೆದರು.

## ಸತ್ಯಮಂಗಲ ಕೆರೆ ಅಂಗಳದಲ್ಲಿ ಪರಿಸರ ಜಾಗೃತಿಗಾಗಿ ಚಿತ್ತಾರ

» ಮೊದಲನೇ ಪುಟದಿಂದ

ಪತ್ರಕರ್ತರ ಸಂಘದ ಮಾಜಿ ಜಿಲ್ಲಾಧ್ಯಕ್ಷ ರವಿ ನಾಕಲಗೂಡು ಅವರುಬಿ.ಎಸ್.ದೇಸಾಯಿ ಅವರ ಕೊಡುಗೆಯನ್ನು ಸ್ಮರಿಸಿದರು. ಚಿತ್ಕಲಾ ಫೌಂಡೇಷನ್ ಅಧ್ಯಕ್ಷ ಬಿ.ಎಸ್.ದೇಸಾಯಿ ಅವರು ಮಾತನಾಡಿ, ಹಾಸನ ನೈಸರ್ಗಿಕವಾಗಿ ಶ್ರೀಮಂತ ಜಿಲ್ಲೆ. ಆದರೆ, ಇತ್ತೀಚಿನ ದಿನಗಳಲ್ಲಿ ಇಲ್ಲಿಯೂ ಪರಿಸರ ಜಾಗೃತಿ ಮೂಡಿಸುವ ಅನಿವಾರ್ಯತೆ ಸೃಷ್ಟಿಯಾಗಿರುವುದು ವಿಷಾದನೀಯ. ಅಭಿವೃದ್ಧಿ ನೆಪದಲ್ಲಿ ಪರಿಸರವನ್ನು ಹಾಳು ಮಾಡುತ್ತಿದ್ದೇವೆ. ಈ ಸಂಬಂಧ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಚಿತ್ಕಲಾ ಫೌಂಡೇಷನ್‌ನಿಂದ ಪ್ರತಿ ತಿಂಗಳ ಮೊದಲ ಭಾನುವಾರ ಜಿಲ್ಲಾದ್ಯಂತ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಿದ್ದು, ಅದಕ್ಕೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಕೈ ಜೋಡಿಸಿರುವುದು ಸಂತಸ ತಂದಿದೆಯೆಂದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಉದಯರವಿ, ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಶಶಿಕಲಾ ದೇಸಾಯಿ, ಕಿಶೋರ ಕಲಾವಿದರಾದ ತನಿಷಾ, ಸಾನ್ವಿ, ಪೋಷಕರಾದ ಸವಿತಾ, ಮಂಜುಳಾ ಶಿವಕುಮಾರ್ ಇತರರಿದ್ದರು.

# ನಗರದ ಜನತೆಗೆ ಸೂಕ್ತ ಮೂಲಭೂತ ಸೌಕರ್ಯ

• ಪ್ರಜೋದಯ ವರದಿ

**ಅರಸೀಕೆರೆ:** ನಗರ ಬೆಳೆದಂತೆ ನಗರದಲ್ಲಿ ವಾಸಿಸುವ ಜನತೆಗೆ ಸೂಕ್ತ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ನಗರಸಭೆಗೆ ನನಗೆ ಸಂಪೂರ್ಣ ಸಹಕಾರ ನೀಡುತ್ತಿದ್ದು, ಮುಂದೆಯೂ ನೀಡುವುದಾಗಿ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಭರವಸೆ ನೀಡಿದರು.

ನಗರದ ಕಂತೇನಹಳ್ಳಿ ಕೆರೆ ಅಂಗಳದಲ್ಲಿ ನಗರಸಭೆ ವತಿಯಿಂದ ನಿರ್ಮಾಣಗೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಮೃತ ಹಸ್ತದಿಂದ ಇತ್ತೀಚೆಗೆ ಲೋಕಾರ್ಪಣೆಗೊಂಡಿರುವ ಈಜುಕೊಳದ ನಿರ್ವಹಣೆ ಜವಾಬ್ದಾರಿಯನ್ನು ಖಾಸಗಿಯವರಿಗೆ ವಹಿಸಿದ್ದು, ಈ ಸಂಬಂಧ ಇಂದು ಪರಿಶೀಲನೆ ನಡೆಸಿ ಮಾತನಾಡಿದ ಅವರು, ನೂತನವಾಗಿ ವಿಸ್ತಾರಗೊಳ್ಳುತ್ತಿರುವ ಬಡಾವಣೆಗಳಲ್ಲಿ ಕುಡಿಯುವ ನೀರು, ಚರಂಡಿ, ರಸ್ತೆ ಅಭಿವೃದ್ಧಿ, ವಿದ್ಯುತ್ ಹಾಗೂ ಉದ್ಯಾನವನಗಳ ನಿರ್ಮಾಣಕ್ಕೆ ಒತ್ತು ನೀಡುತ್ತಿದ್ದು, ಈಗಾಗಲೇ ಎಲ್ಲಾ ಕಾಮಗಾರಿಗಳು ಹೊಸ ಬಡಾವಣೆಗಳಲ್ಲಿ ನಿರ್ವಿಘ್ನವಾಗಿ ಸಾಗುತ್ತಿವೆ ಎಂದರು.



ಅದೇ ರೀತಿ ಯುವ ಸಮುದಾಯಕ್ಕೆ ಅನುಕೂಲ ಆಗುವ ರೀತಿಯಲ್ಲಿ ನಗರದಲ್ಲಿ ಜೇನುಕಲ್ ಕ್ರೀಡಾಂಗಣವನ್ನು ಅಭಿವೃದ್ಧಿ ಮಾಡಿದ್ದು, ನಗರದ ಜೂನಿಯರ್ ಕಾಲೇಜು ಆವರಣದ ಒಂದು ಬದಿಯಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಣ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ. ನಗರದ ಜನತೆಯ ಅಪೇಕ್ಷೆ ಮೇರೆಗೆ ಈಗಾಗಲೇ ನಿರ್ಮಾಣವಾಗಿರುವ ಈಜುಕೊಳ ಕೂಡ ವಾರದ ಒಳಗೆ ಈಜು ಪಟುಗಳಿಗೆ ಲಭ್ಯವಾಗಲಿದೆ ಎಂದು ಹೇಳಿದರು.

ನಗರಸಭೆ ನಿಕಟಪೂರ್ವ ಅಧ್ಯಕ್ಷ ಎಂ. ಸಮೀವುಲ್ಲಾ ಅವರು ಮಾತನಾಡಿ, ಶಾಸಕ ಶಿವಲಿಂಗೇಗೌಡರ ದೂರದೃಷ್ಟಿ ಚಿಂತನೆಯ ಫಲ, ಇಂದು ಅರಸೀಕೆರೆ ಒಂದು ಮಾದರಿ ನಗರವಾಗಿ ಉಪುಗೊಳ್ಳುತ್ತಿದೆ.

ವಿದ್ಯಾಕ್ಷೇತ್ರ, ಆರೋಗ್ಯ ಕ್ಷೇತ್ರ, ಶೈಕ್ಷಣಿಕ ಕ್ಷೇತ್ರ, ಕ್ರೀಡೆ ಅಭಿವೃದ್ಧಿ ನೀಡುವುದರ ಜೊತೆಗೆ ಪ್ರತಿಯೊಂದು ಕ್ಷೇತ್ರದಲ್ಲೂ ಅಭಿವೃದ್ಧಿಗೆಂದು ಸರ್ಕಾರದಿಂದ ದೊರೆಯುವ ಅನುದಾನವನ್ನು ಸಮರ್ಪಕ ಬಳಕೆ ಮಾಡುವ ಮೂಲಕ ಶಾಸಕರ ಕಾರ್ಯವೈಖರಿ ನಮ್ಮಂತಹ ಯುವ ರಾಜಕಾರಣಿಗಳಿಗೆ ಆದರ್ಶ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ನಗರಸಭೆ ಪೌರಾಯುಕ್ತ ಕೃಷ್ಣಮೂರ್ತಿ, ಜಿಲ್ಲಾ ವಕ್ಫ್‌ಬೋರ್ಡ್ ಅಧ್ಯಕ್ಷ ಸೈಯದ್ ಸಿಕಂದರ್, ನಗರಸಭೆ ನಿಕಟಪೂರ್ವ ಸದಸ್ಯರಾದ ಜಿ.ಟಿ.ಗಣೇಶ್, ದರ್ಶನ್, ರೋಷನ್, ಮುಖಂಡರಾದ ಕೃಷ್ಣ, ಗಿರೀಶ್, ನಗರಸಭೆಯ ಅಭಿಯಂತರ ಸುನಿಲ್, ಜಗದೀಶ್ ಮೊದಲಾದವರಿದ್ದರು.


# ಭೀಮಾ ಕೋರೆಗಾಂವ್ ಶೌರ್ಯ, ಸ್ವಾಭಿಮಾನದ ಪ್ರತೀಕ

• ಪ್ರಜೋದಯ ವರದಿ

**ಬೇಲೂರು:** ಭೀಮ ಕೋರೆಗಾವ್ ಶೌರ್ಯ ದಿನಾಚರಣೆಯನ್ನು ಪಟ್ಟಣದ ತಾಲ್ಲೂಕು ಕಚೇರಿ ಮುಂಭಾಗ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ವೇಳೆ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಸಲ್ಲಿಸಿ ಗೌರವ ನಮನ ಸಲ್ಲಿಸಲಾಯಿತು.

ಶಾಸಕ ಹುಲ್ಲಳ್ಳಿ ಸುರೇಶ್ ಅವರು ಮಾತನಾಡಿ, 1818ರ ಜನವರಿ 1ರಂದು ಭೀಮಾ ಕೋರೆಗಾಂವ್‌ನಲ್ಲಿ ನಡೆದ ಯುದ್ಧವು ದಲಿತ ಸಮುದಾಯದ ಶೌರ್ಯ, ಸ್ವಾಭಿಮಾನ ಮತ್ತು ಹೋರಾಟದ ಪ್ರತೀಕವಾಗಿದೆ. ಅಲ್ಪಸಂಖ್ಯಾತ ಯೋಧರು ಅಪಾರ ಶಕ್ತಿಶಾಲಿ ಸೇನೆಯನ್ನು ಎದುರಿಸಿ ಜಯ ಸಾಧಿಸಿದ ಈ ಐತಿಹಾಸಿಕ ಘಟನೆ ದೇಶದ ಸಮಾನತೆ ಮತ್ತು ನ್ಯಾಯದ ಸಂಕೇತವಾಗಿದ್ದು, ಇಂದಿನ ಪೀಳಿಗೆಗೆ ಪ್ರೇರಣೆಯಾಗಬೇಕು, ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತ್ವದ ಸಂದೇಶಗಳನ್ನು ಎಲ್ಲರೂ



ಅನುಸರಿಸಬೇಕು. ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಾಮಾಜಿಕ ನ್ಯಾಯ ಕಾಪಾಡುವ ಹೊಣೆ ನಮ್ಮೆಲ್ಲರದ್ದು ಎಂದು ತಿಳಿಸಿದರು.

ಕೋರೆಗಾಂವ್ ಕದನ ಭಾರತದ ಇತಿಹಾಸದಲ್ಲೇ ಮಹತ್ವಪೂರ್ಣ ಸ್ಥಾನ ಪಡೆದಿದೆ. ಇದಕ್ಕೆ ಕಾರಣ ಮಹರ್ ಸೈನಿಕರ ಸ್ವಾಭಿಮಾನಿ ಹೋರಾಟ ಇತಿಹಾಸ ಪುಟದಲ್ಲಿ ಉಳಿದಿರುವ ಇಂತಹ ವಿಜಯೋತ್ಸವ ನಮ್ಮ ಅವಧಿಯಲ್ಲಿ ಬೇಲೂರಿನಲ್ಲಿ ಅದ್ದೂರಿಯಾಗಿ ಆಚರಣೆ ಮಾಡುತ್ತಿರುವುದು ಅತೀವ ಸಂತೋಷ ಎಂದರು.

ತಹಶೀಲ್ದಾರ್ ಶ್ರೀಧರ್ ಕಂಕನವಾಡಿ ಮಾತನಾಡಿ, ಭೀಮಾ ಕೋರೆಗಾಂವ್ ಶೌರ್ಯದಿನವು ಸಮಾನತೆ, ಸ್ವಾಭಿಮಾನ ಹಾಗೂ ನ್ಯಾಯದ ಮೌಲ್ಯಗಳನ್ನು ಸಾರುವ ಐತಿಹಾಸಿಕ ದಿನವಾಗಿದೆ. ಈ ಶೌರ್ಯಗಾಥೆ ದಮನಿತರ ಹೋರಾಟದ ಸಂಕೇತವಾಗಿದ್ದು, ಸಮಾಜದಲ್ಲಿ ಸಂವಿಧಾನಾತ್ಮಕ ಮೌಲ್ಯಗಳನ್ನು ಬಲಪಡಿಸುವಲ್ಲಿ ಇಂತಹ ದಿನಾಚರಣೆಗಳು ಮಹತ್ವದ ಪಾತ್ರ ವಹಿಸುತ್ತವೆ. ಅಂಬೇಡ್ಕರ್ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿ ಕೊಳ್ಳಬೇಕೆಂದು ಹೇಳಿದರು.

ಬೇಲೂರಿನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಅದ್ದೂರಿಯಾಗಿ ಆಚರಿಸುವ ಶೌರ್ಯ ದಿವಸ್ ಈ ಭಾರಿ ಹೊಸ ಸ್ವರೂಪದಿಂದಲೇ ವಿಜಯೋತ್ಸವ ಸಂಪನ್ನಗೊಂಡಿತ್ತು. ನೆಹರು ನಗರದ ತಾಲ್ಲೂಕು ಕಚೇರಿಯಿಂದ ಹೊರಟ ಮೆರವಣಿಗೆ ನೆಹರು ವೃತ್ತ, ಯಗಚಿ ಸೇತುವೆ, ಬಸವೇಶ್ವರ ವೃತ್ತದಿಂದ ಜೂನಿಯರ್ ಕಾಲೇಜಿನಲ್ಲಿ ಆಯೋಜಿಸಿದ್ದ ಬಹಿರಂಗ ಸಭೆಯ ತನಕ ಸಾಗಿತು. ಮೆರವಣಿಯಲ್ಲಿ ಡಿಜೆ ಸೌಂಡ್. ನಾಶೀಕ್ ಡೋಲು ಇನ್ನಿತರ ಜಾನಪದ ಶೈಲಿ ಕಲೆಗಳು ಮತ್ತು ಕೋರೆಗಾಂವ್ ವಿಜಯೋತ್ಸವ ಪ್ರತೀಕವಾದ ಸ್ತಂಭಚಿತ್ರ ಆಕರ್ಷಣೆಯಾಗಿತ್ತು.

ಕೋರೆಂಗಾವ್ ವಿಜಯೋತ್ಸವ ಸಮಿತಿ ಅಧ್ಯಕ್ಷ ಸತೀಶ್, ಅಶೋಲ್, ಎಂ.ಜಿ.ವೆಂಕಟೇಶ್, ರಾಕೇಶ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಜಿ.ಟಿ.ಇಂದಿರಾ, ಸದಸ್ಯರಾದ ಲತಾ ಮಂಜೇಶ್ವರಿ ದೇವಪ್ರಸಾಧ್, ಪುರಸಭೆ ಮಾಜಿ ಅಧ್ಯಕ್ಷೆ ತೀರ್ಥ ಕುಮಾರಿ ವೆಂಕಟೇಶ, ಪುರಸಭೆ ಸದಸ್ಯ ಜಮಾಲುದ್ದೀನ್, ಪರ್ವತಯ್ಯ ಗಂಗಾಧರ್ ಬಹುಜನ್, ಬಿ.ಎಲ್.ಲಕ್ಷ್ಮಣ್, ತೆಂಡೇಕೆರೆ ರಮೇಶ್ ಹಾಜರಿದ್ದರು.

# ಜಕಣಾಚಾರಿ ಹೆಸರು ಅಜರಾಮರ

## ವಿಶ್ವಕ್ಕೆ ಪ್ರಸಿದ್ಧ ಶಿಲ್ಪಕಲೆಯನ್ನು ಪರಿಚಯಿಸಿದ ಅಮರಶಿಲ್ಪಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ಕಲ್ಲನ್ನು ಸುಂದರ ಪ್ರತಿಮೆಯಾಗಿಸುವ ಮೂಲಕ ವಿಶ್ವಕ್ಕೆ ಪ್ರಸಿದ್ದ ಶಿಲ್ಪಕಲೆಯನ್ನು ಪರಿಚಯಿಸುವ ಮೂಲಕ ಜಕಣಾಚಾರ್ಯ ಅಮರ ಶಿಲ್ಪಿಯಾದರು ಎಂದು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಕಲಾವಿದ ಶಿವಕುಮಾರಾಚಾರ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಅಮರಶಿಲ್ಪಿ ಜಕಣಾಚಾರ್ಯರ ಜಯಂತಿ ಆಚರಿಸಿದ ಕಾರ್ಯಕ್ರಮದಲ್ಲಿ ಸಂಸ್ಮರಣೆ ನಡೆಸಿದರು. ತಮ್ಮ ಜೀವಿತಾವಧಿಯ ಮುಕ್ಕಾಲು ಶಿಲ್ಪಕಲೆಗಳ ಕೊಡುಗೆ ನೀಡಲು ಮುಡುಪಾಗಿಟ್ಟರೂ, ಒಂದೆಡೆಯೂ ಅವರ ಹೆಸರಿಸಿಲ್ಲ. ಸಮಾಜಕ್ಕೆ ನೀಡಿದ ಕೊಡುಗೆಯಿಂದಲೇ ಇಷ್ಟು ಶತಮಾನಗಳು ಕಳೆದರೂ ಅವರ ಹೆಸರು ಅಮರವಾಗಿ ಉಳಿದಿದೆ.

ಸೋಮನಾಥ ದೇವಾಲಯ, ಹಳೇಬೀಡು, ಬೇಲೂರು ಹಾಗೂ ಅವರ ಹುಟ್ಟೂರು ಕೈದಾಳ ದೇಗುಲ



ಗಳು ಇಂದಿಗೂ ಅವರ ಖ್ಯಾತಿಯನ್ನು ಸಾರಿದೆ. ಕುಸುರಿ ಕೆತ್ತನೆಗಳು ಅಮರತ್ವವನ್ನು ಪ್ರತಿಧ್ವನಿಸಿವೆ. ಕಲೆಯಲ್ಲಿ ಜೀವಂತಿಕೆ ಬೆರೆಸಿದ ಶಿಲ್ಪಗಳು ದೇಶ, ವಿದೇಶಿಗರನ್ನು ಮೂಕ ವಿಸ್ಮಯರನ್ನಾಗಿ ಮಾಡಿವೆ. ಸೂರ್ಯ, ಚಂದ್ರ ಇರುವವರೆಗೂ ಶಿಲ್ಪಶಾಸ್ತ್ರ ಪ್ರಜ್ವಲಿಸುವಂತೆ ಮಾಡಿದ ಕೀರ್ತಿ ಜಕಣಾಚಾರ್ಯರಿಗೆ ಸಲ್ಲುತ್ತದೆ ಎಂದರು.

ಪಟ್ಟಣದ ಶ್ರೀ ಕಾಳಿಕಾಂಬ ದೇವಾಲಯದಲ್ಲಿ ಸಮೂದಾಯದವರು ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಿದರು.

ತಹಸೀಲ್ದಾರ್ ರೇಣುಕುಮಾರ್, ವಿಶ್ವಕರ್ಮ ಸಂಘದ ತಾಲೂಕು ಅಧ್ಯಕ್ಷ ಗಂಗಾಧರಾಚಾರ್, ಉಪಾಧ್ಯಕ್ಷ ರೇವಣ್ಣಾಚಾರ್, ಅರ್ಚಕ ಮಲ್ಲೇಶಾಚಾರ್, ಮುಖಂಡ ಕಲ್ಲೇಶಾಚಾರ್ ಹಾಗೂ ಮಹೇಶಾಚಾರ್ ಉಪಸ್ಥಿತರಿದ್ದರು.

# ಪೊಲೀಸ್ ಕರ್ತವ್ಯಕ್ಕೆ ಜನಪ್ರತಿನಿಧಿಗಳ ಹಸ್ತಕ್ಷೇಪ ಬೇಡ

## ಜಿಲ್ಲಾ ನ್ಯಾಯಾಧೀಶ ರವಿಕುಮಾರ್ ಸಲಹೆ | ರಸ್ತೆ ಸುರಕ್ಷತಾ ಸಪ್ತಾಹ

• ಪ್ರಜೋದಯ ವರದಿ



**ಹಾಸನ:** ಪೊಲೀಸರ ಕರ್ತವ್ಯಕ್ಕೆ ಜನಪ್ರತಿನಿಧಿಗಳ ಹಸ್ತಕ್ಷೇಪ ಮಾಡುವುದಕ್ಕೆ ಸಂಪೂರ್ಣ ಕಡಿವಾಣ ಬೀಳಬೇಕು. ಹೆಲ್ಮೆಟ್ ಧರಿಸದ ಬೈಕ್ ಸವಾರನೂ ರಾಜಕಾರಣಿಗಳಿಂದ ಪೊಲೀಸರಿಗೆ ಕರೆ ಮಾಡಿಸುವ ಸಂಸ್ಕೃತಿ ಒಳ್ಳೆಯದಲ್ಲವೆಂದು ಪ್ರಭಾರ ಜಿಲ್ಲಾ ಮತ್ತು ಪ್ರಧಾನ ಸತ್ರ ನ್ಯಾಯಾಧೀಶ ರವಿಕುಮಾರ್ ಅವರು ಹೇಳಿದರು.

ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಗುರುವಾರ ಏರ್ಪಡಿಸಿದ್ದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಉದ್ಘಾಟಿಸಿ ಮಾತನಾಡಿ, ಪೊಲೀಸರ ಕರ್ತವ್ಯ ನಿರ್ವಹಣೆಗೆ ಜನಪ್ರತಿನಿಧಿಗಳು ಹಸ್ತಕ್ಷೇಪ ಮಾಡಬಾರದು. ಪ್ರತಿಯೊಬ್ಬರೂ ಪೊಲೀಸರಿಗೆ ಸಹಕಾರ ನೀಡಿದರೆ ಅಪರಾಧ ಪ್ರಕರಣ ತಡೆಯಲು ಸಾಧ್ಯವಾಗುತ್ತದೆಂದು ಹೇಳಿದರು.

ಹೆಲ್ಮೆಟ್ ಧರಿಸದೆ ಅಥವಾ ಮದ್ಯಪಾನ ಮಾಡಿ ವಾಹನ ಚಲಾಯಿಸಿದವರ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳುವಾಗ ಕೆಲವು ಜನಪ್ರತಿನಿಧಿಗಳು ಪ್ರಭಾವ ಬಳಸಿ ದೂರವಾಣಿ ಕರೆ ಮಾಡಿಸುವಂತಹ ಪ್ರವೃತ್ತಿ ಹೆಚ್ಚಾಗಿದೆ. ಇಂತಹ ಹಸ್ತಕ್ಷೇಪದಿಂದಲೇ ಅಪಘಾತಗಳು ಹೆಚ್ಚಾಗುತ್ತಿವೆ ಎಂದರು.

ವಿಮೆ ಇಲ್ಲದೆ ವಾಹನ ಚಲಾಯಿಸಬಾರದು. 18 ವರ್ಷದ ಮಕ್ಕಳಿಗೆ ಪರವಾನಗಿ ಇಲ್ಲದೆ ವಾಹನ ನೀಡಬಾರದು. ವಾಹನ ಚಲಾಯಿಸಿ ಅಪಘಾತವಾದರೆ ವಾಹನ ಮಾಲೀಕರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ. ಜಿಲ್ಲೆಯಲ್ಲೇ ಹೆಲ್ಮೆಟ್ ಧರಿಸದೆ ಶೇ.80 ರಷ್ಟು ಜನರು ವಾಹನ ಚಲಾಯಿಸುತ್ತಾರೆ. ಸಾರ್ವಜನಿಕರು ಕೂಡ ಯಾವ ಕಾರಣಕ್ಕೂ ಕಾನೂನು ಉಲ್ಲಂಘಿಸದೆ ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸಬೇಕೆಂದು ಸಲಹೆ ನೀಡಿದರು.

ರಸ್ತೆ ಅಪಘಾತದಲ್ಲಿ ಜಿಲ್ಲೆಗೆ 4ನೇ ಸ್ಥಾನ

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾತನಾಡಿ, ರಸ್ತೆ ಅಪಘಾತದಲ್ಲಿ ಜಿಲ್ಲೆಗೆ ನಾಲ್ಕನೇ ಸ್ಥಾನವಿದ್ದು ವಾಹನ ಚಾಲಕರು ಜಾಗರೂಕತೆ ವಹಿಸುವ ಮೂಲಕ ಅಪಘಾತ ಪ್ರಮಾಣ ತಗ್ಗಿಸಬೇಕೆಂದು ಹೇಳಿದರು.

ರಸ್ತೆ ನಿಯಮ ಪಾಲಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಜಿಲ್ಲಾಡಳಿತ, ಪೊಲೀಸ್ ಇಲಾಖೆ ಹಾಗು ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ನಿರಂತರವಾಗಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಗುತ್ತಿದೆ. ಆದರೂ ಸಹ ಅಪಘಾತಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದು ವೇಗದ ಚಾಲನೆ, ಮೊಬೈಲ್ ಬಳಕೆ ಅವಘಡಗಳಿಗೆ ಕಾರಣವಾಗಿದೆ. ಸಾರ್ವಜನಿಕರು ಜವಾಬ್ದಾರಿಯುತವಾಗಿ ರಸ್ತೆ ನಿಯಮ ಪಾಲಿಸಬೇಕು. ಅದರಿಂದ ಕಾನೂನು ಉಲ್ಲಂಘನೆ ಆಗುವುದು ಕಡಿಮೆ ಆಗುತ್ತದೆ. ವಾಹನ ಚಾಲಕರು ಸಹಕಾರ ನೀಡಬೇಕೆಂದರು.

ರಸ್ತೆ ಸುರಕ್ಷಣೆ ಮತ್ತು ವಾಹನಗಳ ಸುರಕ್ಷತೆ ಜೊತೆಗೆ ಸಾರ್ವಜನಿಕರು, ಪ್ರಯಾಣಿಕರ ಹಿತ ಕಾಪಾಡಬೇಕು. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಕಾರು ಇತರೆ ವಾಹನಗಳನ್ನು ಚಲಾಯಿಸುವಾಗ ಸೀಟ್ ಬೆಲ್ಟ್ ಹಾಕಬೇಕು. ವೇಗದ ಮಿತಿ ನಿಯಂತ್ರಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಜಿಲ್ಲೆಯಲ್ಲಿ 2024ರಲ್ಲಿ 1208 ಅಪಘಾತ ಪ್ರಕರಣ ವರದಿಯಾಗಿದ್ದು, 219 ಜನರು ಮರಣ ಹೊಂದಿದ್ದಾರೆ. 2025ರಲ್ಲಿ 1328 ಅಪಘಾತ ನಡೆದಿದ್ದು, 260 ಜನರು ಮೃತಪಟ್ಟಿದ್ದಾರೆ. ಇಂತಹ ಘಟನೆಗಳಿಂದ ಎಷ್ಟು ಕುಟುಂಬಗಳಿಗೆ ತೊಂದರೆಯಾಗುತ್ತದೆ ಎಂಬುದನ್ನು ಅರಿಯಬೇಕು. ಎಷ್ಟೋ ಮಕ್ಕಳು ಅನಾಥರಾಗುತ್ತಿದ್ದಾರೆ. ತಂದೆ-ತಾಯಿಗಳು ಮಕ್ಕಳನ್ನು ಕಳೆದುಕೊಳ್ಳುತ್ತಿದ್ದಾರೆ. ವಾಹನ ಚಲಾಯಿಸುವಾಗ ರಸ್ತೆಗೆ ಅಡ್ಡಲಾಗಿ ಪ್ರಾಣಿಗಳು ಬರುತ್ತವೆ. ಸಾಕಷ್ಟು ಜಾಗರೂಕರಾಗಿದ್ದರೆ ಮಾತ್ರ ನಿರ್ದಿಷ್ಟ ಗುರಿ ತಲುಪಲು ಸಾಧ್ಯವಾಗುತ್ತದೆಂದರು.

ಚಾಲಕರಿಗೆ ಅಗತ್ಯವಿರುವ ಮಾಹಿತಿಗಳನ್ನು ಪೋಸ್ಟರ್‌ಮೂಲಕ ನಾವು ನೀಡುತ್ತಿದ್ದೇವೆ. ಆರೋಗ್ಯದ ಕಡೆಗೆ ಹೆಚ್ಚಿನ ಒತ್ತು ನೀಡಬೇಕು. ಕೆಲವು ಚಾಲಕರು ಗುಟ್ಕಾ, ತಂಬಾಕು ರಸವನ್ನು ಉಗಿಯಲು ಕಿಟಕಿಯಿಂದ ತಲೆ ಹೊರ ಹಾಕುತ್ತಾರೆ. ಆ ಒಂದು ಸೆಕೆಂಡ್‌ನಲ್ಲಿ ಅಪಘಾತಗಳು ಆಗುತ್ತವೆ. ಅವುಗಳ ಬಗ್ಗೆ ಎಚ್ಚರ ವಹಿಸಬೇಕೆಂದು ಜಿಲ್ಲಾಧಿಕಾರಿ ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಮಾತನಾಡಿದ ಅವರು, ಯುವ ಪೀಳಿಗೆ ಮೋಜು, ಮಸ್ತಿಗಾಗಿ ವೇಗವಾಗಿ ವಾಹನ ಚಾಲನೆ ಮಾಡುತ್ತಾರೆ. ಅದರಿಂದ ಅಮೂಲ್ಯ ಜೀವಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಕಾನೂನು ಹಾಗು ಜೀವನ ಮೌಲ್ಯಗಳನ್ನುಅರಿತು ಎಚ್ಚರಿಕೆಯಿಂದ ವಾಹನ ಓಡಿಸಬೇಕೆಂದರು.

ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಸರಿಯಾದ ಅರಿವಿಲ್ಲದೆ ಗಾಯಾಳುಗಳಿಗೆ ನೀರು ಕುಡಿಸುವುದು ಅಪಾಯಕಾರಿ. ಪ್ರಥಮ ಚಿಕಿತ್ಸೆ ನೀಡಿ ತಕ್ಷಣ ಆಸ್ಪತ್ರೆಗೆ ರವಾನಿಸಬೇಕು, ಅಪಘಾತವಾದ ಸ್ಥಳದಲ್ಲಿ ವಿಡಿಯೋ, ಫೋಟೋ ತೆಗೆದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವ ಪ್ರವೃತ್ತಿಯನ್ನು ಮೊದಲು ನಿಲ್ಲಿಸಬೇಕೆಂದರು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಕಾಶ್ ಅವರು ಮಾತನಾಡಿ, ಸಾರಿಗೆ ಇಲಾಖೆಯಿಂದ ಈಗಾಗಲೇ ಹಮ್ಮಿಕೊಳ್ಳಲಾಗಿರುವ ವಿವಿಧ ಜಾಗೃತಿ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಕೆಎಸ್‌ಆರ್‌ಟಿಸಿ, ಆಟೋ ಮತ್ತು ಟ್ಯಾಕ್ಸಿ ಚಾಲಕರು, ಮಾಲೀಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್‌ಕುಮಾರ್, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನೀಯರ್ ಗಿರೀಶ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ, ಹಿರಿಯ ಮೋಟಾರು ತಪಾಸಣಾಧಿಕಾರಿ ಯಶವಂತ್, ಎಸ್.ಎಸ್. ಪಾಷಾ, ಪತ್ರಕರ್ತ ರವಿ ನಾಕಲಗೂಡು ಮತ್ತಿತರರಿದ್ದರು.

# ರಾಷ್ಟ್ರೀಯ ಕ್ರೀಡಾಡಳಿತ ಕಾಯ್ದೆ ಭಾಗಶಃ ಜಾರಿ

• ಪ್ರಜೋದಯ ವರದಿ

**ನವದೆಹಲಿ:** ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆಯು ಗುರುವಾರದಿಂದ ಭಾಗಶಃ ಜಾರಿಗೆ ಬಂದಿದೆ. ಈ ಕಾಯ್ದೆಯು ಶಕ್ತಿಶಾಲಿ ರಾಷ್ಟ್ರೀಯ ಕ್ರೀಡಾ ಮಂಡಳಿ (ಎನ್‌ಎಸ್‌ಬಿ) ಮತ್ತು ರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿ (ಟ್ರಿಬ್ಯೂನಲ್) ಸ್ಥಾಪನೆಗೆ ದಾರಿಮಾಡಿಕೊಡಲಿದೆ.

2025ರ ಆಗಸ್ಟ್ 18ರಂದು ಈ ಕಾಯ್ದೆಗೆ ಸಂಬಂಧಿಸಿ ಅಧಿಸೂಚನೆ ಹೊರಡಿಸಲಾಗಿತ್ತು. ಇದು ದೇಶದ ಕ್ರೀಡಾ ಕ್ಷೇತ್ರದ ಇತಿಹಾಸದಲ್ಲೇ ಅತಿ ದೊಡ್ಡ ಸುಧಾರಣಾ ಕ್ರಮ ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಬಣ್ಣಿಸಿದ್ದರು.

ಈ ಕಾಯ್ದೆಯ ಕೆಲವು ಸೆಕ್ಷನ್‌ಗಳು ಮತ್ತು ಸಬ್ ಸೆಕ್ಷನ್‌ಗಳು ಜನವರಿ 1ರಿಂದ ಜಾರಿಗೆ ಬಂದಿವೆ ಎಂದು ಕ್ರೀಡಾ ಸಚಿವಾ ಲಯ ಬುಧವಾರ ತಡರಾತ್ರಿ ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಕಾಯ್ದೆಯ ಪ್ರಕಾರ, ಭಾರತ ಒಲಿಂಪಿಕ್ ಸಂಸ್ಥೆ, ರಾಷ್ಟ್ರೀಯ ಪ್ಯಾರಾ ಲಿಂಪಿಕ್‌ಸಮಿತಿ, ಕ್ರೀಡಾ ಸಂಸ್ಥೆಗಳು, ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳು (ಎನ್ ಎಸ್‌ಎಫ್) 15 ಸದಸ್ಯರನ್ನು ಮೀರ ದಂತೆ ಕಾರ್ಯಕಾರಿ ಸಮಿತಿಗಳನ್ನು ರಚಿಸ ಬೇಕಾಗುತ್ತದೆ. ಅದರಲ್ಲಿ ಕನಿಷ್ಠ ಇಬ್ಬರು ಯೋಗ್ಯ ಕ್ರೀಡಾಪಟುಗಳು ಇರುವುದು ಕಡ್ಡಾಯವಾಗಿದೆ. ರಾಷ್ಟ್ರೀಯ ಕ್ರೀಡಾ ಮಂಡಳಿ ಮತ್ತು ರಾಷ್ಟ್ರೀಯ ಕ್ರೀಡಾ ಟ್ರಿಬ್ಯೂನಲ್ ಸ್ಥಾಪನೆ ಪ್ರಕ್ರಿಯೆಗೂ ಚಾಲನೆ ದೊರಕಲಿದೆ.

ಕ್ರೀಡಾ ಮಂಡಳಿಗೆ ಅಧ್ಯಕ್ಷ ಮತ್ತು ಸದಸ್ಯರನ್ನು ಕೇಂದ್ರ ಸರ್ಕಾರ ನೇಮಕ ಮಾಡಲಿದೆ. ಸಮರ್ಥ, ಸಚ್ಚಾರಿತ್ರ್ಯವುಳ್ಳ ಕ್ರೀಡಾ ಪಟುಗಳನ್ನು, ಸಾರ್ವಜನಿಕ ಆಡಳಿತ, ಕ್ರೀಡಾಡಳಿತ, ಕ್ರೀಡಾ ನಿಯಮಗಳಿಗೆ ಸಂಬಂಧಿಸಿದ ಕ್ಷೇತ್ರದಲ್ಲಿ ನುರಿತವರನ್ನು ನೇಮಕ ಮಾಡುವಂತೆ ಕಾಯ್ದೆಯಲ್ಲಿ ತಿಳಿಸಲಾಗಿದೆ. ಶೋಧನಾ ಮತ್ತು ಆಯ್ಕೆ ಸಮಿತಿಯ ಶಿಫಾರಸುಗಳ ಆಧಾರದಲ್ಲಿ ನೇಮಕಗಳು ನಡೆಯಲಿದೆ.

ಇನ್ನು ಕೆಲವೇ ತಿಂಗಳಲ್ಲಿ ಚುನಾವಣೆ ನಿಗದಿಯಾಗಿರುವ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ, ಅದನ್ನು ಡಿಸೆಂಬರ್‌ವರೆಗೆ ಮುಂದೂಡಲು ಸಚಿವಾಲಯವು ಅವಕಾಶ ನೀಡಿದೆ. ಹೀಗಾಗಿ ಅಖಿಲ ಭಾರತ ಫುಟ್ ಬಾಲ್ ಫೆಡರೇಷನ್‌ನ ಚುನಾವಣೆ ಸಹ ವರ್ಷಾಂತ್ಯಕ್ಕೆ ನಡೆಯಲಿದೆ.

ಕ್ರೀಡಾ ಫೆಡರೇಷನ್‌ಗಳು ಸರ್ಕಾರದಿಂದ ಹಣಕಾಸಿನ ನೆರವು ಪಡೆಯಬೇಕಾದರೆ ರಾಷ್ಟ್ರೀಯ ಕ್ರೀಡಾ ಮಂಡಳಿಯ ಮಾನ್ಯತೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. ಮಂಡಳಿ ಸದಸ್ಯರ ಗರಿಷ್ಠ ವಯೋಮಿತಿಯನ್ನು 65ಕ್ಕೆ ನಿಗದಿಪಡಿಸಲಾಗಿದೆ. ವಯಸ್ಸಿನ ನಿಬಂಧನೆ ಗೊಳಪಟ್ಟು ಸದಸ್ಯರು ಮತ್ತೊಂದು ಅವಧಿಗೆ ನೇಮಕಗೊಳ್ಳ ಬಹುದಾಗಿದೆ.

ಕ್ರೀಡಾ ಸಂಬಂಧಿ ವ್ಯಾಜ್ಯಗಳನ್ನು ನಿಭಾಯಿಸುವ ಉದ್ದೇಶದಿಂದ ಕ್ರೀಡಾ ನ್ಯಾಯ ಮಂಡಳಿ ರೂಪಿಸಲಾಗುತ್ತಿದೆ. ಈಗಾಗಲೇ ಉಲ್ಲೇಖಿಸಿರುವ;ನಿಯಮಗಳ ಪ್ರಕಾರ ರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿ ಸದಸ್ಯರ ಗರಿಷ್ಠ ವಯೋಮಿತಿಯನ್ನು 67ಕ್ಕೆ ನಿಗದಿಪಡಿಸಲಾಗಿದೆ. ಕ್ರೀಡಾ ಫೆಡರೇಷನ್‌ಗಳು ಮತ್ತು ಇತರ ಕ್ರೀಡಾ ಸಂಸ್ಥೆಗಳ ಚುನಾವಣೆಗಳನ್ನು ಸುಗಮ ವಾಗಿ ನಡೆಸಲು ರಾಷ್ಟ್ರೀಯ ಕ್ರೀಡಾ ಚುನಾವಣಾ ಸಮಿತಿಯನ್ನು (ಎನ್‌ಎಸ್‌ಇಪಿ) ಸ್ಥಾಪಿಸುವ ಪ್ರಕ್ರಿಯೆಯೂ ಬಾಕಿಯಿದೆ.

# ನೆಟ್‌ವರ್ಕಿಂಗ್-ದತ್ತಾಂಶ ಕೇಂದ್ರಿತ ವರ್ಷ: ಭಾರತೀಯ ಸೇನೆ

• ಪ್ರಜೋದಯ ವರದಿ



**ನವದೆಹಲಿ:** ಭಾರತೀಯ ಸೇನೆಯು 2026ನೇ ವರ್ಷವನ್ನು ನೆಟ್‌ವರ್ಕಿಂಗ್ ಮತ್ತು ದತ್ತಾಂಶ ಕೇಂದ್ರಿತ ವರ್ಷವೆಂದು ಘೋಷಿಸಿದೆ.

ಇದು ಸಂಪರ್ಕ ವ್ಯವಸ್ಥೆ, ನೈಜ ಸಮಯದಲ್ಲಿ ನಿರ್ಧಾರ ಕೈಗೊಳ್ಳುವುದು ಮತ್ತು ಯುದ್ಧದ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಆ ಮೂಲಕ ಭವಿಷ್ಯದ ಸವಾಲುಗಳನ್ನು ಎದುರಿಸಲು ಸನ್ನದ್ಧವಾಗಿರುವ ಸೇನೆಗೆ ಬಲ ಮತ್ತು ಚುರುಕುತನ ನೀಡುತ್ತದೆಂದು ಸೇನೆ ತಿಳಿಸಿದೆ.

ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಹೊಸ ವರ್ಷದ ಸಂದೇಶವನ್ನು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಹಂಚಿಕೊಂಡಿದ್ದು, ಭಾರತೀಯ ಸೇನೆಯು ಪರಿವರ್ತನೆಯ ದಶಕಕ್ಕೆ ಸಾಕ್ಷಿಯಾಗುತ್ತಿದೆ. ಜಂಟಿ ಕಾರ್ಯಾಚರಣೆ, ಸ್ವಾವಲಂಬನೆ ಮತ್ತು ನಾವೀನ್ಯತೆಯು ಸೇನಾ ಶಕ್ತಿಯ ಪ್ರಮುಖ ಆಧಾರ ಸ್ತಂಭಗಳಾಗಿವೆ ಎಂದು ಹೇಳಿದ್ದಾರೆ.

ಸ್ವದೇಶಿ ತಂತ್ರಜ್ಞಾನಗಳ ಪರಿಣಾಮಕಾರಿ ಬಳಕೆ, ಹೊಸ ಆಲೋಚನೆ ಮತ್ತು ನಿರಂತರ ಸುಧಾರಣೆಗಳ ಮೂಲಕ ನಾವು ಸೇನೆಯನ್ನು ಸಮರ್ಥವಾಗಿ ಮತ್ತು ಭವಿಷ್ಯದ ಸವಾಲುಗಳಿಗೆ ಸನ್ನದ್ಧವಾಗಿಸುತ್ತಿದ್ದೇವೆ. ನೆಟ್‌ವರ್ಕಿಂಗ್ ಮತ್ತು ದತ್ತಾಂಶ ಕೇಂದ್ರಿತ ವ್ಯವಸ್ಥೆಗಳು ಈ ಪರಿವರ್ತನೆಗೆ ಹೊಸ ವೇಗವನ್ನು ನೀಡುತ್ತವೆಂದು ತಿಳಿಸಿದ್ದಾರೆ.

ಭಾರತೀಯ ಸೇನೆಯು ಸದಾ ಜಾಗರೂಕವಾಗಿದ್ದು, ದೇಶದ ಭದ್ರತೆಯನ್ನು ಖಾತರಿಪಡಿಸು ತ್ತಿದೆ. ಕಳೆದ ವರ್ಷ, ಶತ್ರುಗಳ ಸಂಚುಗಳಿಗೆ ಆಪರೇಷನ್ ಸಿಂಧೂರದ ಮೂಲಕ ತಕ್ಕ ಉತ್ತರ ನೀಡಲಾಗಿತ್ತು. ಈ ಕಾರ್ಯಾಚರಣೆ ಇನ್ನೂ ಮುಂದುವರಿದಿದೆ ಎಂದು ಹೇಳಿದ್ದಾರೆ.

**(ಗುರುವಾರದ ಕಾಫಿ ಧಾರಣೆ: 50 ಕೆಜಿಗೆ)**

**ಅರೇಬಿಕಾ ಪಾರ್ಚ್‌ಮೆಂಟ್**- 26,200 **ರೂ.**
**ಅರೇಬಿಕಾ ಚೆರಿ**-13,800 **ರೂ.**
**ರೊಬಸ್ಟಾ ಪಾರ್ಚ್‌ಮೆಂಟ್**-16,500 **ರೂ.**
**ರೊಬಸ್ಟಾ ಚೆರಿ** - 9,300**ರೂ.**
(**ಆರ್‌ಸಿ ಒಟಿ**: 350, **ಎಸಿ ಒಟಿ** 515)

# ಕೋರೆಗಾಂವ್ ಯುದ್ಧ ಜಾತಿ ಶೋಷಣೆಯ ಪ್ರತಿರೋಧ

## ಬಿಎಸ್‌ಪಿ ರಾಜ್ಯ ಸಂಯೋಜಕ ಗಂಗಾಧರ್ ಬಹುಜನ್ ಅಭಿಮತ

• ಪ್ರಜೋದಯ ವರದಿ



**ಬೇಲೂರು:** ಭೀಮಾ ನದಿ ತೀರದ ಕೋರೆಗಾಂವ್‌ನಲ್ಲಿ 1818ರ ಜನವರಿ 1ರಂದು ನಡೆದ ಯುದ್ಧವು ಭಾರತದ ಇತಿಹಾಸದಲ್ಲಿ ಕೇವಲ ಒಂದು ಸೈನಿಕ ಸಂಘರ್ಷವಲ್ಲ, ಅದು ಬ್ರಾಹ್ಮಣೀಯ ಪೇಶ್ವೆ ಜಾತಿ ಶೋಷಣೆಯ ವಿರುದ್ಧ ಬಹುಜನ ಸಮಾಜ ನೀಡಿದ ನೇರ ಮತ್ತು ಘೋಷಿತ ಪ್ರತಿರೋಧ ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಸಂಯೋಜಕ ಗಂಗಾಧರ್ ಬಹುಜನ್ ಅವರು ತಿಳಿಸಿದರು.

ಕೋರೆಗಾಂವ್ ವಿಜಯೋತ್ಸವದ ಸ್ಮರಣಾರ್ಥ ಬಹುಜನ ಸಮಾಜ ಪಾರ್ಟಿ ಪಟ್ಟಣದ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಮಹಾರಾಷ್ಟ್ರದಲ್ಲಿ ಪೇಶ್ವೆಗಳ ಆಡಳಿತದ ಅವಧಿಯಲ್ಲಿ ದಲಿತ ಬಹುಜನರನ್ನು ಮಾನವರೆಂದೇ ಪರಿಗಣಿಸದೆ, ಜಾತಿ ಆಧಾರಿತ ದಮನವನ್ನು ಮನುಸ್ಮೃತಿ ಆಧಾರಿತ ಕಾನೂನು, ಸಂಪ್ರದಾಯ ಮತ್ತು ಹಿಂಸೆ ಮೂಲಕ ಜಾರಿಗೊಳಿಸಿತ್ತು. ನೀರು, ಭೂಮಿ, ಶಿಕ್ಷಣ, ಸೇನೆಗೆ ಸೇರ್ಪಡೆ, ಸಾಮಾನ್ಯ ಗೌರವ ಎಲ್ಲವೂ ಬಹುಜನರಿಗೆ ನಿರಾಕರಿಸಲ್ಪಟ್ಟಿತ್ತು. ಈ ಕ್ರೂರ ಮತ್ತು ಅಮಾನವೀಯ ವ್ಯವಸ್ಥೆಯ ವಿರುದ್ಧವೇ ಈ ಕೋರೆಗಾಂವ್ ಯುದ್ಧ ಎಂದರು.

ಕೇವಲ 500 ಜನ ಮಹರ್ ಸೈನಿಕರು 28,000 ಸಂಖ್ಯೆಯ ಬಹುದೊಡ್ಡ ಪೇಶ್ವೆ ಸೇನೆ ಎದುರಿಸಿ ಹಿಮ್ಮೆಟ್ಟಿಸಿ ಸೋಲಿಸಿದ್ದು ಐತಿಹಾಸಿಕ ದಾಖಲೆ. ಈ ಯುದ್ಧದಲ್ಲಿ ಸೋತದ್ದು ಕೇವಲ ಪೇಶ್ವೆ ಸೇನೆ ಅಲ್ಲ, ಸೋತದ್ದು ಶ್ರೇಣೀಕೃತ ಜಾತಿ ವ್ಯವಸ್ಥೆ ಮತ್ತು ಬ್ರಾಹ್ಮಣಿಕೆಯ ಅಧಿಪತ್ಯ. ಕೋರೆಗಾಂವ್ ವಿಜಯಸ್ತಂಭದಲ್ಲಿ ಕೆತ್ತಲ್ಪಟ್ಟಿರುವ 22 ಮಹಾರ್ ಸೈನಿಕರ ಹೆಸರು, ಬಹುಜನರು ಯಾವತ್ತೂ ಯಾರಿಗೂ ದಾಸರಲ್ಲ, ಗುಲಾಮರಲ್ಲಾ, ನಾವು ಸ್ವಾಭಿಮಾನಿಗಳು, ಕೆಚ್ಚೆದೆಯ ಹೋರಾಟಗಾರರು ಎಂಬುದನ್ನು ಘೋಷಿಸುತ್ತವೆ ಎಂದರು

ಡಾ. ಬಿ.ಆರ್.ಅಂಬೇಡ್ಕರ್ ಅವರು ಮೊದಲ ಬಾರಿಗೆ 1927ರಲ್ಲಿ ಕೋರೆಗಾಂವ್ ವಿಜಯ ಸ್ಥಂಭದ ಬಳಿಗೆ ತೆರಳಿ ಹುತಾತ್ಮ ಯೋಧರಿಗೆ ಗೌರವ ನಮನ ಸಲ್ಲಿಸಿ ಕೋರೆಗಾಂವ್ ಯುದ್ಧವು ದಲಿತ-ಬಹುಜನರ ಸ್ವಾಭಿಮಾನ ಮತ್ತು ರಾಜಕೀಯ ಜಾಗೃತಿಯ ಸಂಕೇತವಾಗಿ ಗುರುತಿಸಿದರು ಎಂದು ಸ್ಮರಿಸಿದರು.

ಬಿಎಸ್‌ಪಿ ತಾಲ್ಲೂಕು ಅಧ್ಯಕ್ಷ ಪ್ರಕಾಶ್ ಕೆಸಗೋಡು ಮಾತನಾಡಿ, ಇತ್ತೀಚಿಗೆ ಕೆಲ ಶಕ್ತಿಗಳು ಕೋರೆಗಾಂವ್ ಸ್ಮರಣೆ ಅಪಮಾನಗೊಳಿಸಲು, ಅದನ್ನು ಬ್ರಿಟೀಷ್ ಪರ ಎಂದು ಮಸುಕು ಗೊಳಿಸಲು ಯತ್ನಿಸುತ್ತಿರುವುದು ಬಹುಜನ ಇತಿಹಾಸ ಅಳಿಸುವ ಸಂಚಾಗಿದೆ. ಕೋರೆಗಾಂವ್ ವಿಜಯೋತ್ಸವವನ್ನು ಸ್ವಾಭಿಮಾನಿಗಳು ಆಚರಣೆ ಮಾಡಬೇಕೇ ವಿನಃ ಗುಲಾಮರು ಆಚರಿಸುವುದು ಶೋಭೆ ತರುವುದಿಲ್ಲ, ಕೋರೆಗಾಂವ್ ಬ್ರಿಟೀಷ್ ವಿಜಯೋತ್ಸವವಲ್ಲ, ಅದು ಜಾತಿವಾದಿ ಬ್ರಾಹ್ಮಣ ಪೇಶ್ವೆಗಳ ಜಾತಿ ಶೋಷಣೆಯ ವಿರುದ್ಧದ ಬಹುಜನರಾದ ಮಹರ್ ಸೈನಿಕರು ಹಾಕಿದ ಸಾವಾಲು ಎಂದರು.

ಬಿಎಸ್ಪಿ ಜಿಲ್ಲಾ ಕಾರ್ಯದರ್ಶಿಗಳಾದ ರಾಜು ಬೆಳ್ಳೊಟ್ಟೆ, ಎಂ.ಜಿ. ಕಿರಣ್‌ಕುಮಾರ್, ಜಿಲ್ಲಾ ಬಿವಿಎಫ್ ಸಂಯೋಜಕ ಹೇಮಂತ್ ಕುಮಾರ್, ಬಿಎಸ್‌ಪಿ ತಾಲ್ಲೂಕು ಸಂಯೋಜಕ ಉಮೇಶ್, ಉಪಾಧ್ಯಕ್ಷ ನಿಂಗರಾಜು ಬೆಳ್ಳಾವರ, ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಮುಖಂಡರಾದ ಮಲ್ಲೇಶ್, ಹೊನ್ನಯ್ಯ, ಕೇಶವ, ನಾಗೇಂದ್ರ, ಮನು, ಅಣ್ಣಪ್ಪ, ನಾಗೇಶ್, ಹೇಮಲತಾ, ಮೂರ್ತಿ, ತಿಮ್ಮಯ್ಯ ಇದ್ದರು.



**ಅರಸೀಕೆರೆ ನಗರದ ವಾರ್ಡ್ ನಂ.22ರ ಸಂತೆ ಮೈದಾನದಲ್ಲಿರುವ ಐಡಿಎಸ್ ಎಂಟಿ ಮಳಿಗೆಯ ನವೀಕರಣ ಕಾಮಗಾರಿಗೆ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ ಅವರು ಭೂಮಿಪೂಜೆ ನೆರವೇರಿಸಿದರು. ನಗರಸಭೆ ಮಾಜಿ ಅಧ್ಯಕ್ಷ ಎಂ.ಸಮೀವುಲ್ಲಾ, ನಗರಸಭೆ ಆಯುಕ್ತ ಕೃಷ್ಣಮೂರ್ತಿ, ಕಾಂಗ್ರೆಸ್ ಮುಖಂಡರು ಹಾಜರಿದ್ದರು.**

# 4.33 ಲಕ್ಷ ರೂ. ಬೆಲೆಯ ಮದ್ಯ ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ಹೊಸ ವರ್ಷಾಚಣೆ ಸಂಭ್ರಮಾಚರಣೆಗಾಗಿಎಂಎಸ್‌ಐಎಲ್ ಬಾರ್ ಬೀಗ ಮುರಿದು 4.33 ಲಕ್ಷ ರೂ. ಮೌಲ್ಯದ ಮದ್ಯ ಕಳವು ಮಾಡಿ ರುವ ಘಟನೆ ತಾಲ್ಲೂಕಿನ ಚಗಚಗೆರೆ ಗ್ರಾಮದ ಹಿರಿಯಾಳು ಕ್ರಾಸ್‌ನಲ್ಲಿ ನಡೆದಿದೆ.

ಡಿ.30ರ ರಾತ್ರಿ ಬಾರ್ ಕೌಂಟರ್ ಹಿಂಭಾಗ ಗೋಡೆ ಕೊರೆದು ಒಳನುಗ್ಗಿರುವ ಕಳ್ಳರು 180 ಎಂಎಲ್‌ನ, 107 ಬಿಪಿ ಟೆಟ್ರಾ ಪ್ಯಾಕೆಟ್, 90 ಎಂಎಲ್‌ನ 103 ಬಿಪಿ ಟೆಟ್ರಾ ಪ್ಯಾಕೆಟ್, 750 ಎಂಎಲ್‌ನ ಡಿಎಸ್‌ಪಿ ಬ್ಲಾಕ್ 3 ಬಾಟಲಿ, 90 ಎಂಎಲ್‌ನ ಎಂಸಿ ವಿಸ್ಕಿ ಟೆಟ್ರಾ ಪ್ಯಾಕೆಟ್, 750 ಎಂಎಲ್‌ನ ಎಂಸಿ ವಿಸ್ಕಿಯ 2 ಬಾಟಲಿ, 90 ಎಂಎಲ್‌ನ ಎಂಸಿ ವಿಸ್ಕಿಯ 96 ಟೆಟ್ರಾ ಪ್ಯಾಕೆಟ್, 180 ಎಂಎಲ್‌ನ 48 ಒಟಿ ಟೆಟ್ರಾ ಪ್ಯಾಕೆಟ್, 180 ಎಂಎಲ್‌ನ 866 ಒಸಿ ಟೆಟ್ರಾ ಪ್ಯಾಕೆಟ್, 90 ಎಂ ಎಲ್‌ನ 1,436 ಒಸಿ ಟೆಟ್ರಾ ಪ್ಯಾಕೆಟ್, 750 ಎಂಎಲ್‌ನ 2 ಐಬಿ ಬಾಟಲಿ, 90 ಎಂಎಲ್‌ನ 298 ಐವಾಡ್ಸ್ ಟೆಟ್ರಾ ಪ್ಯಾಕೆಟ್, 180 ಎಂಎಲ್ 2 ಬ್ಲೆಂಡರ್ ಪ್ರೈಡ್ ಬಾಟಲಿ, 90 ಎಂಎಲ್‌ನ 96 ಡಿಕೆ ಟೆಟ್ರಾ ಪ್ಯಾಕ್, 375 ಎಂಎಲ್‌ನ 1 ಎಂಸಿಬಿ ಬಾಟಲಿ, 180 ಎಂಎಲ್‌ನ 397 ಎಂಸಿಬಿ ಟೆಟ್ರಾ ಪ್ಯಾಕೆಟ್, 90 ಎಂಎಲ್‌ನ 299 ಟೆಟ್ರಾ ಪ್ಯಾಕ್, 750 ಎಂಎಲ್‌ನ 3 ಎಂಹೆಚ್‌ಬಿ ಬಾಟಲಿ, 180ಎಂಎಲ್‌ನ 5 ಎಂಹೆಚ್‌ಬಿ ಬಾಟಲಿ, 180 ಎಂಎಲ್‌ನ 312 ಓಲ್ಡ್ ಅಡ್ಮಿರಲ್ ಟೆಟ್ರಾ ಪ್ಯಾಕೆಟ್‌ಗಳನ್ನು ಹಾಗು ಸಿಸಿ ಟಿವಿಯ ಡಿವಿಆರ್ ಸಹ ಕಳವು ಮಾಡಿ ಸಾಕ್ಷ್ಯ ನಾಶ ಗೊಳಿಸಿದ್ದಾರೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಗಾಂಜಾ ಸೇವನೆ: 10 ಜನರ ಬಂಧನ

**ಸಕಲೇಶಪುರ:** ಹೊಸ ವರ್ಷದ ಸಂಭ್ರಮಾಚರಣೆಗಾಗಿ ಗಾಂಜಾ ಸೇವನೆ ಮಾಡಿದ್ದ 8 ಜನರನ್ನು ಯಸಳೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೆತ್ತೂರು ಗ್ರಾಮದ ಸೂರ್ಯ ರಿಟ್ರೀಟ್ ಹೋಂ ಸ್ಟೇಯಲ್ಲಿ ವಾಸ್ತವ್ಯ ಹೂಡಿದ್ದವರು ಅಮಲು ಪದಾರ್ಥ ಅನಾಗರಿಕರಂತೆ ವರ್ತಿಸುತ್ತಿದ್ದ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ್ದರು.

ಬೇಲೂರು ತಾಲ್ಲೂಕು ಜಗಬೋರನಹಳ್ಳಿ ಗ್ರಾಮದ ಜೆ.ಪಿ.ಗಗನ್, ಸಕಲೇಶಪುರ ತಾಲ್ಲೂಕು ಸುಂಡೇಕೆರೆಯ ಸಿ.ಎಂ.ಚಂದನ್,ಬಿರಡಹಳ್ಳಿಯ ಬಿ.ಆರ್. ಅಮೃತ್, ಬಿ.ಎಸ್.ಪವನ್, ಕುಣಿಗನಹಳ್ಳಿಯ ಕೆ.ಜಿ.ರಂಜನ್, ನೇರಡಿಯ ಲಿಖಿತ್‌ಕುಮಾರ್, ಹಾಸನದ ಬಿ.ಎನ್. ಯಶವಂತ್, ಎಂ.ಎಸ್.ಹರ್ಷ, ಜೆ.ಪಿ. ಗೌತಮ್, ಐ.ಎನ್.ಹರ್ಷ ಬಂಧಿತರು. ವೈದ್ಯಕೀಯ ತಪಾಸಣೆ ಬಳಿಕ ಎಲ್ಲರೂ ಗಾಂಜಾ ಸೇವಿಸಿದ್ದು ದೃಢಪಟ್ಟಿದೆ. ಯಸಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಓದಿನ ದಿನಗಳಲ್ಲಿ ಕಾಲಹರಣ ಮಾಡುವುದು ಬೇಡ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಶೈಕ್ಷಣಿಕ ಹಂತದಲ್ಲಿ ಓದಿನತ್ತ ಗಮನ ಹರಿಸದೆ ಕಾಲಹರಣ ಮಾಡಿದರೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಕಿರೀಸಾವೆ ಗ್ರಾಮದಲ್ಲಿ ಲೆಕ್ಕ ಶೀರ್ಷಿಕೆ 2022-23ನೇ ಸಾಲಿನ ವಿವೇಕ ಯೋಜನೆ ಯಡಿ 13.90 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕೊಠಡಿ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜ ಉತ್ತಮವಾಗಿ ರೂಪು ಗೊಳ್ಳುವಲ್ಲಿ ಶಿಕ್ಷಣವು ಪ್ರಮುಖ ಪಾತ್ರ ವಹಿಸಲಿದೆ ಎಂದರು.

ಸರ್ಕಾರಿ ಉನ್ನತ ಹುದ್ದೆಗಳನ್ನು ಹರಸಿ ಅಥವಾ ಬಯಸಿ ತಮ್ಮ ಮಕ್ಕಳನ್ನು ಓದಿಸುವ ಬದಲು ಸಾಮಾನ್ಯ ಜ್ಞಾನ ಪಡೆದು ಸಮಾಜದಲ್ಲಿ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಶಿಕ್ಷಣವಂತರಾಗಿ ಬೆಳೆಸುವುದು ಪ್ರತಿಯೊಬ್ಬ ಪಾಲಕರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಮೌಲ್ಯಯುತ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಅಗತ್ಯವಿದೆ. ಶಾಲೆಯಲ್ಲಿ ಶಿಕ್ಷಕರು ನೀಡುವ ಶಿಕ್ಷಣದ ಜೊತೆಗೆ ಮನೆಯಲ್ಲಿ ಪಾಲಕರು ಉತ್ತಮ ಸಂಸ್ಕಾರ ಕಲಿಸಬೇಕು. ಮನೆಯಲ್ಲಿ ಮಕ್ಕಳ ಮುಂದೆ ಅಸಭ್ಯ ವರ್ತನೆ, ಪದಗಳ ಬಳಕೆ ಹಾಗೂ ಅನುಚಿತವಾಗಿ ನಡೆದುಕೊಳ್ಳಬಾರದು. ನಾವು ಇಡುವ ಹೆಜ್ಜೆ ಮಕ್ಕಳ ಭವಿಷ್ಯಕ್ಕೆ ಮೆಟ್ಟಿಲಾಗಬೇಕೆಂದು ಪಾಲಕರಿಗೆ ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕ ವ್ಯವಸ್ಥೆ ಬೆಳೆದಂತೆಲ್ಲ ಮಾನವೀಯ ಮೌಲ್ಯ ಕುಸಿಯುತ್ತಿದೆ. ಗುರು-ಹಿರಿಯರಿಗೆ ಗೌರವ ನೀಡುವ ವ್ಯವಸ್ಥೆ ಕಣ್ಮರೆಯಾಗುತ್ತಿದೆ. ಅನಾಥಾಶ್ರಮ ಹಾಗೂ ವೃದ್ಧಾಶ್ರಮಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಮೌಲ್ಯಯುತ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಸಿಗದೇ ಸಮಾಜದ ಬದಲಾವಣೆ ಸಾಧ್ಯವಿಲ್ಲವೆಂದು ಆತಂಕ ವ್ಯಕ್ತಪಡಿಸಿದರು.

ಕಳೆದ ವರ್ಷ ಇದೇ ಶಾಲೆಯ ಎರಡು ಕೊಠಡಿಗಳನ್ನು ದುರಸ್ತಿ ಮಾಡಿಸಲಾಗಿದೆ. ಮಕ್ಕಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ 6 ಡೆಸ್ಕ್‌ಗಳ ವ್ಯವಸ್ಥೆ ಮಾಡಲಾಗುವುದು. ಜೊತೆಗೆ ಪಾಲಕರ ಹಾಗೂ ವಿದ್ಯಾರ್ಥಿಗಳ ಬೇಡಿಕೆಯಂತೆ ಸ್ಮಾರ್ಟ್ ಕ್ಲಾಸ್ ತೆರೆಯಲು ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಲಕ್ಷ್ಮಣಗೌಡ, ಚಂದ್ರಮ್ಮ, ಮಾಜಿ ಸದಸ್ಯ ದೇವರಾಜೇಗೌಡ, ಬಿಆರ್‌ಸಿ ಅನಿಲ್, ಶಿಕ್ಷಣ ಸಂಯೋಜಕರಾದ ಶ್ರೀನಿವಾಸ್, ಕರಿಯಪ್ಪಗೌಡ, ಸಮೂಹ ಸಂಪನ್ಮೂಲ ವ್ಯಕ್ತಿ ಧರ್ಮಪಾಲ್, ಎಸ್‌ಡಿಎಂಸಿ ಅಧ್ಯಕ್ಷೆ ಶಾಂತ, ಸದಸ್ಯೆ ನೇತ್ರ, ಮುಖ್ಯಶಿಕ್ಷಕಿ ಎಚ್.ಈ.ಮಂಜುಳಾ, ಸಹ ಶಿಕ್ಷಕರಾದ ಎ.ಎಸ್.ಕವಿತಾ, ಎ.ಸುಚಿತ್ರ, ಪ್ರಮುಖರಾದ ರಾಕೇಶ್, ರೂಪೇಶ್, ವೇದಮೂರ್ತಿ, ಲಿಂಗರಾಜು, ಪಾಲಕರು ಹಾಗೂ ಇತರರು ಇದ್ದರು.

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ
ಹಾಸನ ಜಿಲ್ಲೆ, ಹಾಸನ-573201
E-mail: ddpi.edu.karhas@nic.in Ph:08172-268234
ಸಂಖ್ಯೆ:ಲೆಪ2/ಜಿ.ಪಂ.ನಿಧಿ.ಅ.ಸಾ.ಖ/08/2025-26.
ದಿನಾಂಕ:31.12.2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಹಾಸನ ಜಿಲ್ಲೆಯ 25 ಸರ್ಕಾರಿ ಪ್ರೌಢ ಶಾಲೆಗಳಿಗೆ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯೂಮೆಂಟ್ ಅನುದಾನದಲ್ಲಿ ಇಂಟರ್‍ಯಾಕ್ಟೀವ್ ಪೆನಲ್ ಬೋರ್ಡ್(ಸ್ಮಾರ್ಟ್ ಕ್ಲಾಸ್) ಸಾಮಗ್ರಿಗಳನ್ನು ಖರೀದಿಸಲು ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಅಲ್ಪಾವದಿ ಟೆಂಡರ್ ಅನ್ನು KPPP ಮುಖಾಂತರ ಅಂತರ್ಜಾಲ https://kppp.karnataka.gov.in ನಲ್ಲಿ ದಿಜ್ವಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಆಸಕ್ತಿ ಇರುವ ಅರ್ಹ ಸಂಸ್ಥೆ/ಏಜೆನ್ಸಿಯವರು ಅರ್ಜಿ ಸಲ್ಲಿಸಲು ಕೋರಿದೆ. ಟೆಂಡರ್ ಅಂದಾಜು ಮೊತ್ತ : 50,00,000/- ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 31-12-2025 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09-01-2026, 4-00 P.M ತಾಂತ್ರಿಕ ಅರ್ಜಿಗಳನ್ನು ತೆರೆಯುವ ದಿನಾಂಕ: 12-01-2026, 11.00 A.M ಆರ್ಥಿಕ ಬಿಡ್ ತೆರೆಯುವ ದಿನಾಂಕ 15.01.2026 ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9743237434 ಸಂಪರ್ಕಿಸಬಹುದು.

ಸಹಿ/- ಉಪ ನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ, ಹಾಸನ ಜಿಲ್ಲೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/902/ಕೆಎಸ್‌ಎಂಸಿಎ/2025-26

# ರಾಷ್ಟ್ರ ಮಟ್ಟದ ಯೋಗ: ರಮ್ಯಾ ಚಾಂಪಿಯನ್




• ಪ್ರಜೋದಯ ವರದಿ

**ಹಾಸನ:** ಇತ್ತೀಚೆಗೆ ಆಂಧ್ರ ಪ್ರದೇಶದ ಬಾಪಟ್ಲಾದ ಅನ್ನಪೂರ್ಣೇಶ್ವರಿ ಕ್ಷೇತ್ರದಲ್ಲಿ ನಡೆದ ರಾಷ್ಟ್ರಮಟ್ಟದ ಯೋಗ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ನಗರದ ಮಹಿಳಾ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿನಿ ಡಿ.ಜೆ.ರಮ್ಯಾ ಪ್ರಥಮ ಸ್ಥಾನ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಎಲೆಕ್ಟ್ರಾನಿಕ್ ಕಮ್ಯುನಿಕೇಷನ್ ವ್ಯಾಸಂಗ ಮಾಡುತ್ತಿರುವ ಡಿ.ಜೆ.ರಮ್ಯಾ ಕಳೆದ ಎರಡು ವರ್ಷಗಳಿಂದ ಯೋಗಾಭ್ಯಾಸ ಮಾಡುತ್ತಿದ್ದು ಕಡಿಮೆ ಅವಧಿಯಲ್ಲಿಯೇ ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸಿ ಬಹುಮಾನ ಪಡೆದಿದ್ದಾರೆ.

ಇತ್ತೀಚೆಗೆ ಬೆಂಗಳೂರಿನ ಕೆಂಗೇರಿಯಲ್ಲಿ ನಡೆದ ರಾಜ್ಯ ಮಟ್ಟದ ಯೋಗ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಮೈಸೂರು ವಿಶ್ವ ಮಾನವ ಯೋಗ ಸಂಸ್ಥೆ ರಾಜ್ಯ ಮಹೋತ್ಸವದ ಪ್ರಯುಕ್ತ ಆಯೋಜಿಸಿದ್ದ ರಾಷ್ಟ್ರೀಯ ಮುಕ್ತ ಯೋಗ ಚಾಂಪಿಯನ್‌ಶಿಪ್‌ನಲ್ಲಿ ದ್ವಿತೀಯ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾ ಗಿದ್ದರು. ರಮ್ಯಾ ಅವರ ಸಾಧನೆಗೆ ಯೋಗ ಗುರು ಕೆ.ಎನ್. ನಾಗರಾಜು ಅವರು ಅಭಿನಂದಿಸಿದ್ದಾರೆ.

# ಪರಸ್ಪರ ಸಹಕಾರದಿಂದ ಸಹಕಾರಿ ಕ್ಷೇತ್ರ ಏಳಿಗೆ

• ಪ್ರಜೋದಯ ವರದಿ

**ಮಾಡಾಳು:** ಪರಸ್ಪರ ಸಹಕಾರದಿಂದ ಸಹಕಾರಿ ಕ್ಷೇತ್ರ ಅಭಿವೃದ್ಧಿ ಹೊಂದಲು ಸಾಧ್ಯವೆಂದು ನಿರಂಜನ ಪೀಠ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಶ್ರೀ ರುದ್ರಮುನಿ ಸ್ವಾಮೀಜಿ ತಿಳಿಸಿದರು.

ಅರಸೀಕೆರೆ ತಾಲ್ಲೂಕಿನ ಕಣಕಟ್ಟೆ ಹೋಬಳಿ ಮಾಡಾಳು ಗ್ರಾಮದ ನಿರಂಜನ ಪೀಠದ ಆವರಣದಲ್ಲಿ ಆಯೋಜಿಸಿದ್ದ ಸೌಹಾರ್ದ ಸಹಕಾರ ಸಂಘದ 2026ನೇ ಸಾಲಿನ ಸಹಕಾರ ಸಪ್ತಾಹ ಕಾರ್ಯಕ್ರಮ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಸ್ವಾಮೀಜಿ ಸಹಕಾರ ಸಂಸ್ಥೆಗಳಲ್ಲಿ ಆಡಳಿತ ಮಂಡಳಿಯ ಅಧ್ಯಕ್ಷರು, ನಿರ್ದೇಶಕರು ಹಾಗು ನೌಕರ ವರ್ಗ ಪಾರದ ರ್ಶಕವಾಗಿ ಬಡವ ಬಲ್ಲಿದ ಎಂಬ ತಾರತಮ್ಯವಿಲ್ಲದೆ ಉತ್ತಮ ಮನೋಭಾವ ಹೊಂದಿ ಕರ್ತವ್ಯ ನಿರ್ವಹಿಸಿದಾಗ ಮಾತ್ರ ಸ್ಥಳೀಯ ಸಂಸ್ಥೆಗಳು ಪ್ರಗತಿ ಪಥದಲ್ಲಿ ಸಾಗುವುದಲ್ಲದೆ ಸಹಕಾರ ಸಂಘದ ಷೇರುದಾರರಿಗೆ ಮತ್ತು ರೈತರಿಗೆ ಆರ್ಥಿಕ ನೆರವು ನೀಡಲು ಅನುಕೂಲವಾಗುತ್ತದೆಂದರು.

ಗ್ರಾಮೀಣ ಭಾಗದಲ್ಲಿ ಇಂತಹ ಸಹಕಾರ ಸಂಘಗಳ ಸ್ಥಾಪಿಸಿ ಆರ್ಥಿಕವಾಗಿ ಹಿನ್ನಡೆಯಲಿರುವ ಮತ್ತು ದುರ್ಬಲವಾಗಿರುವಸಂಘದ ಸದಸ್ಯರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಿ ಸ್ವಾವಲಂಬಿಗಳನ್ನಾಗಿ ಮಾಡಿದಾಗ ಮಾತ್ರ ಅವರ ಬದುಕು ಹಸನಾಗುತ್ತ ದೆಂದರು.



ಸೌಹಾರ್ದ ಸಹಕಾರ ಸಂಘದ ಉಪಾಧ್ಯಕ್ಷ ಎನ್.ಜಿ.ಮರುಳಸಿದ್ದ ಸ್ವಾಮಿ, ನಾಗಸಮುದ್ರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಸ್.ಎಂ.ಗಂಗಾಧರ್, ಸಂಘದ ನಿರ್ದೇಶಕರಾದ ಸುಧಾ ಮಹೇಶ ಕುಮಾರ್, ದುಮ್ಮೇನಹಳ್ಳಿ ಮುಖಂಡರಾದ ಮಾಡಾಳು ಶಿವಲಿಂಗಪ್ಪ, ಸಂಘದ ವೈ.ಬಿ. ನಟರಾಜ್, ಕಾರ್ಯನಿರ್ವಹಣಾಧಿಕಾರಿ ಆರ್.ಬಿ. ಸುಷ್ಮಾ ಉಪಸ್ಥಿತರಿದ್ದರು.

# ಸ್ಕಾಲರ್ಸ್ ಶಾಲೆಯಲ್ಲಿ ಹೊಸ ವರ್ಷದ ಸಂಭ್ರಮ



• ಪ್ರಜೋದಯ ವರದಿ

**ಹಾಸನ:** ನಗರದ ಸ್ಕಾಲರ್ಸ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಗುರುವಾರ ಹೊಸ ವರ್ಷ ವನ್ನು ಉತ್ಸಾಹದಿಂದ ಸ್ವಾಗತಿಸಲಾಯಿತು.

ಶಾಲೆಯ ಆಡಳಿತಾಧಿಕಾರಿ ಡಾ.ಹೆಚ್.ಎನ್. ಚಂದ್ರಶೇಖರ್ ಅವರು ಮಾತನಾಡಿ, ಹೊಸ ವರ್ಷವು ವಿದ್ಯಾರ್ಥಿಗಳಿಗೆ ಆರೋಗ್ಯ, ಯಶಸ್ಸು ಮತ್ತು ಶ್ರೇಷ್ಠತೆಯನ್ನು ಕಲ್ಪಿಸಲಿ. ಸಕಾರಾತ್ಮಕ ಗುರಿಗಳನ್ನು ಹೊಂದಿ ಶಿಸ್ತು ಮತ್ತು ಆತ್ಮವಿಶ್ವಾಸದೊಂದಿಗೆ ವಿದ್ಯಾರ್ಥಿಗಳು ಯಶಸ್ಸು ಸಾಧಿಸ ಬೇಕೆಂದು ಶುಭ ಕೋರಿದರು.

ಕಾರ್ಯದರ್ಶಿ ಮಮತಾ ಚಂದ್ರಶೇಖರ್ ಅವರು ವಿದ್ಯಾರ್ಥಿಗಳಿಗೆ ಶುಭ ಕೋರಿದರು. ಕೇಕ್ ಕತ್ತರಿಸುವ ಮೂಲಕ ಬೋಧಕರು ಹಾಗು ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಸಂಭ್ರಮದಲ್ಲಿ ಭಾಗಿಯಾದರು. ಸ್ಕಾಲರ್ಸ್ ವರ್ಲ್ಡ್ ಸ್ಕೂಲ್‌ನಲ್ಲೂ ಹೊಸ ವರ್ಷ ಆಚರಿಸಲಾಯಿತು.

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
Email:itstaff_ulb_channarayapatna@yahoo.co.in, Phone:08176-255411
ನಂ:ಮುನಿಸಿ:ಸಿಆರ್:ಕಂಶಾ:06:2025-26 ದಿನಾಂಕ:30-12-2025

ಪುರಸಭಾ ಮಳಿಗೆಗಳ ಹರಾಜು ಇಸ್ತಿಹಾರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ: 509:ಜಿಇಎಲ್:2014. ದಿ:14-08-2015 ಮತ್ತು 09-10-2016, ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ,ಬೆಂಗಳೂರು ರವರ ಪತ್ರ ನಂ 10137:ಡಿಎಂಎ:121:ಶಾಪ್:2013-14 ದಿ:07-09-2015, ಮಾನ್ಯ ಜಿಲ್ಲಾಧಿಕಾರಿಗಳ ಆದೇಶ ಪತ್ರ ಸಂಖ್ಯೆ:ಮುನಿಸಿ(2)ಸಿಆರ್:185:2021-22 ದಿ:17-11-2021ರ ರೀತ್ಯಾ ಹಾಗೂ ದಿನಾಂಕ:24-10-2017ರ ಹಾಗೂ 21-01-2021ರಂದು ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಪರಿಶಿಷ್ಟ ಜಾತಿ/ಪಂಗಡದ ಸಂಘ ಸಂಸ್ಥೆಗಳ ಸಮ್ಮುಖದಲ್ಲಿ ನಡೆದ ಮೀಸಲಾತಿಯನ್ನು ಲಾಟರಿ ಮೂಲಕ ನಿಗಧಿಪಡಿಸಿದಂತೆ ಚನ್ನರಾಯಪಟ್ಟಣ ಪುರಸಭೆಯಲ್ಲಿ ಅವಧಿ ಮುಗಿದಿರುವ ಮಳಿಗೆಗಳನ್ನು ಇ-ಪ್ರಕ್ಯೂರ್‌ಮೆಂಟ್ (kpp.karnataka.gov.in) ಮೂಲಕ ವಿಲೇವಾರಿ ಮಾಡಲು ತೀರ್ಮಾನಿಸಲಾಗಿದ್ದು, ಸದರಿ ಮಳಿಗೆಗಳನ್ನು ವ್ಯಾಪಾರ ನಡೆಸಲು ಹಕ್ಕು ಪಡೆಯುವ ಆಸಕ್ತರು ದಿನಾಂಕ:12-01-2026 ರ ಸಂಜೆ 5.00 ಗಂಟೆಯೊಳಗೆ ಮುಂಗಡ ಠೇವಣಿ ಮೊತ್ತವನ್ನು kpp Portal ನಲ್ಲಿ ಸೂಚಿಸಿರುವಂತೆ ಪಾವತಿಸಿ ಕೆಳಗೆ ನಮೂದಿಸಿರುವಂತೆ ಸದರಿ ದಿನಾಂಕ:13-01-2026 ರಂದು ಕ್ರ.ಸಂ 01 ರಿಂದ 26 ರವರೆಗೆ ಬೆಳಗ್ಗೆ 10.30 ರಿಂದ ಸಂಜೆ 5.30 ರವರೆಗೆ ನಡೆಯುವ ಇ-ಪ್ರಕ್ಯೂರ್‌ಮೆಂಟ್ ಹರಾಜಿನಲ್ಲಿ ಪಾಲ್ಗೊಳ್ಳಲು ತಿಳಿಸಲಾಗಿದೆ. ಈ ಹರಾಜಿನಲ್ಲಿ ಡೆಲ್ಟಾಟೈಮ್ 5 ನಿಮಿಷ ನೀಡಲಾಗಿದ್ದು ಅದರ ಉಪಯೋಗವನ್ನು ಪಡೆಯಲು ಕೋರಲಾಗಿದೆ, ಇ-ಪ್ರಕ್ಯೂರ್‌ಮೆಂಟ್ ಮೂಲಕ ಹರಾಜು ಪ್ರಕ್ರಿಯೆ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮಳಿಗೆಗಳ ವಿವರಗಳನ್ನು ಕಚೇರಿ ವೇಳೆಯಲ್ಲಿ ಕಂದಾಯ ಶಾಖೆಯಲ್ಲಿ ನೀಡಲಾಗುವುದು. ಮತ್ತು kpp.karnataka.gov.in ನಲ್ಲಿ ತಿಳಿದುಕೊಳ್ಳಬಹುದು.

ಸಹಿ/-ಶ್ರೀ ಜಗದೀಶ ಗಂಗಣ್ಣನವರ್ ಕೆ.ಎ.ಎಸ್.
ಆಡಳಿತಾಧಿಕಾರಿ ಹಾಗೂ ಉಪವಿಭಾಗಾಧಿಕಾರಿಗಳು
, ಪುರಸಭೆ ಚನ್ನರಾಯಪಟ್ಟಣ

ಸಹಿ/-ಶ್ರೀ ಆರ್.ಯತೀಶ್ ಕುಮಾರ್
K.M.A.S ಮುಖ್ಯಾಧಿಕಾರಿ ಪುರಸಭೆ,
ಚನ್ನರಾಯಪಟ್ಟಣ

ವಾಸಾಸಂಇ/ಹಿಸನಿ/ಹಾಸನ/898/ಕೆಎಸ್‌ಎಂಸಿಎ/2025-26

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019